**2018–19 ನೇ ಸಾಲಿನ ವಾರ್ಷಿಕ ವರದಿ**
**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**

**ಪರಿಚಯ**

ರಾಷ್ಟ್ರದಲ್ಲಿ 2000ನೇ ಇಸವಿಯಲ್ಲಿ ಮೌಲ್ಯಮಾಪನ ನೀತಿಯನ್ನು ಪ್ರಾರಂಭಿಸಿದ ಮುಂಚೂಣಿ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದಾಗಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಪಿಡಿ/8/ಇವಿಎನ್(2)2011, ದಿನಾಂಕ: 11–07–2011ರನ್ವಯ ಸ್ಥಾಪಿಸಲಾಗಿರುತ್ತದೆ ಮತ್ತು ಜಿಲ್ಲಾ ಸಹಕಾರ ಸಂಘಗಳ ನೋಂದಣಾಧಿಕಾರಿಗಳ ನೋಂದಾವಣೆ ಪತ್ರ ಸಂಖ್ಯೆ: ಡಿಆರ್‌ಬಿ–ಸಿ/ಎಸ್‌ಒಆರ್/140/2011–12, ದಿನಾಂಕ:19–09–2011ರನ್ವಯ ಕರ್ನಾಟಕ ಸಂಘಗಳ ಅಧಿನಿಯಮ 1960ರಡಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ. ಇದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಯೋಜನೆಗಳ ಅನುಷ್ಠಾನ ಮೇಲು ಉಸ್ತುವಾರಿ ಹಾಗೂ ಅವುಗಳು ಸುಗಮವಾಗಿ ಕಾರ್ಯಗತಗೊಳಿಸಲು ಮತ್ತು ವಿವಿಧ ಇಲಾಖೆಗಳ ಜೊತೆಗೂಡಿ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿ ಮೇಲ್ವಿಚಾರಣೆ ಮಾಡಲು, ಫಲಿತಾಂಶ ಆಧಾರಿತ ಅನುಷ್ಠಾನಕ್ಕಾಗಿ ನೀತಿಗಳನ್ನು ರೂಪಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಸ್ಥಾಪಿಸಲಾಗಿರುತ್ತದೆ.

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪ್ರಮುಖ ಕಾರ್ಯಗಳು**

- ಸರ್ಕಾರದ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ಪರಿಣಾಮಕಾರಿ ಹಾಗೂ ದಕ್ಷ ರೀತಿಯಲ್ಲಿ ಮೌಲ್ಯಮಾಪನ ಮಾಡುವ ಪದ್ಧತಿಯನ್ನು ಅಭಿವೃದ್ಧಿಪಡಿಸುವ ಮೂಲಕ ತನ್ನ ವ್ಯವಹಾರಗಳ ಸ್ಥಿತಿಯನ್ನು ಮೈಲಿಗಲ್ಲಾಗಿಸಲು ಒಂದು ಸಾಧನವಾಗಿ ಸಕ್ರಿಯಗೊಳಿಸಿ ಸಾರ್ವಜನಿಕ ನೀತಿಗಳನ್ನು ಪರಿಷ್ಕರಿಸಲು, ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು ಹಾಗೂ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿ ಅಳೆಯಬಹುದಾದ ಫಲಿತಾಂಶಗಳನ್ನು ಪಡೆಯಲು ಮತ್ತು ನಾಗರಿಕರಿಗೆ ತೃಪ್ತಿಯೊದಗಿಸಲು ಬಳಸಿಕೊಳ್ಳಲು ಸರ್ಕಾರಕ್ಕೆ ಅನುವು ಮಾಡಿ ಕೊಡುವುದು.
- ರಾಜ್ಯದ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ಮೌಲ್ಯಮಾಪನ ಮಾಡಲು ಗುಣಮಟ್ಟಗಳನ್ನು ನಿರ್ಮಿಸುವುದು.
- ಉಪಯುಕ್ತವಾದ ಮತ್ತು ಜವಾಬ್ದಾರಿಯುತ ಮೌಲ್ಯಮಾಪನಗಳನ್ನು ಸಕಾಲಿಕವಾಗಿ ಅನುಷ್ಠಾನಗೊಳಿಸಲು, ಮೇಲ್ವಿಚಾರಣೆ ಮಾಡಲು ಸಾಂಸ್ಥಿಕ ವ್ಯವಸ್ಥೆಯನ್ನು ಒದಗಿಸುವುದು.
- ಪರಿಣಾಮಕಾರಿಯಾಗಿ ಮೌಲ್ಯಮಾಪನಗಳನ್ನು ಕೈಗೊಳ್ಳಲು ಸಾರ್ವಜನಿಕ ಸಂಸ್ಥೆಗಳ ಮತ್ತು ಸ್ವತಂತ್ರ ಮೌಲ್ಯಮಾಪನ ಸಂಸ್ಥೆಗಳ ಸಾಮರ್ಥ್ಯಗಳನ್ನು ನಿರ್ಮಿಸುವುದು ಮತ್ತು ಮಾಹಿತಿ ಆಧಾರಿತ ನಿರ್ಣಯಗಳನ್ನು ತೆಗೆದುಕೊಳ್ಳಲು ಹಾಗೂ ನಾಗರಿಕರಿಗೆ ವರ್ಧಿತ ತೃಪ್ತಿಯೊದಗಿಸಲು ಮೌಲ್ಯಮಾಪನ ಫಲಿತಾಂಶಗಳನ್ನು ಬಳಸಿಕೊಳ್ಳುವುದನ್ನು ಖಚಿತಪಡಿಸುವುದು.

**ಸಿಬ್ಬಂದಿ ಮತ್ತು ಆಡಳಿತ**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಓರ್ವ ಪೂರ್ಣಾವಧಿಯ ಮುಖ್ಯ ಮೌಲ್ಯಮಾಪನಾಧಿಕಾರಿಯವರನ್ನು, ಓರ್ವ ಆಡಳಿತಾಧಿಕಾರಿಯವರನ್ನು, ಮತ್ತು ನಿಯೋಜನೆಯ ಮೇಲೆ ಬೆಂಬಲಿತ ಸಿಬ್ಬಂದಿಗಳನ್ನು, ಓರ್ವ ಲೆಕ್ಕಾಧಿಕಾರಿ, ಸಹ ನಿರ್ದೇಶಕರುಗಳನ್ನು ಮತ್ತು ಸಮಾಲೋಚಕರಾಗಿ ನಿವೃತ್ತಿಯಾದ ಅಧಿಕಾರಿಗಳನ್ನು ಹೊಂದಿರುತ್ತದೆ. ಕಛೇರಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವಾ ಪೂರೈಕೆದಾರರಿಂದ ಪಡೆದುಕೊಳ್ಳಲಾಗಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ತನ್ನ ಪ್ರಕ್ರಿಯೆಗಳ ಬಾಹ್ಯ ಲೆಕ್ಕಪರಿಶೋಧನೆಯನ್ನು ಮಾಡಿರುತ್ತದೆ ಮತ್ತು ಐಎಸ್‌ಓ 9001:2015 ಪ್ರಮಾಣೀಕರಣವನ್ನು ಪಡೆದಿರುತ್ತದೆ. ಈ ದಿಕ್ಕಿನಲ್ಲಿ ಐಎಸ್‌ಓ 9001:2015 ಪ್ರಮಾಣೀಕರಣವನ್ನು ಮುಂದುವರೆಸಲು ದಿ, 11–03–2018ರಂದು ಕಣ್ಗಾವಲು ಲೆಕ್ಕ ಪರಿಶೋಧನೆಯನ್ನು ನಡೆಸಲಾಗಿದ್ದು, ಐಎಸ್‌ಓ 9001:2015ರ ಮರುಪ್ರಮಾಣೀಕರಣವನ್ನು ಪಡೆಯಲಾಗಿದ್ದು, ಪ್ರಸ್ತುತ ಮರುಪ್ರಮಾಣೀಕರಣದ ಅವಧಿಯು ದಿನಾಂಕ: 11–03–2019 ರಿಂದ 10–03–2022ರವರೆಗೆ ಇರುತ್ತದೆ.

ಎಂಪನೇಲ್‌ಮೆಂಟ್ ಸಮಿತಿಯು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳನ್ನು ಮತ್ತು ಸ್ವತಂತ್ರ ಮೌಲ್ಯಮಾಪಕರನ್ನು ಪಟ್ಟಿ ಮಾಡಲು ರೂಪುಗೊಂಡಿರುತ್ತದೆ. ಅರ್ಹ ಸಂಸ್ಥೆಗಳನ್ನು ಪಟ್ಟಿ ಮಾಡಲು ಈ ಸಮಿತಿಯು ಮೂರು ತಿಂಗಳಿಗೊಮ್ಮೆ ಸೇರುತ್ತದೆ.

ಆದಾಯ ತೆರಿಗೆ ಇಲಾಖೆಯು ಪ್ರಮಾಣ ಪತ್ರ ಸಂಖ್ಯೆ ಡಿಐಟಿ(ಇ)ಬಿಎಲ್‌ಆರ್/12ಎಎ/ಎಎಸಿಎಕೆ3058ಆರ್/ಐಟಿಓ(ಇ) –1/2014–15/ಜಿ–356 ದಿನಾಂಕ: 16–06–2014ರನ್ವಯ ಆದಾಯ ತೆರಿಗೆ ಅಧಿನಿಯಮ 1961ರ ಸೆಕ್ಷನ್ 12ಎಎ{ಎ)ರಡಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿಯನ್ನು ನೀಡಿರುತ್ತದೆ

**2018–19ರ ಅವಧಿಯಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳು**

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು 2018–19ನೇ ಸಾಲಿನಲ್ಲಿ 13 ಮೌಲ್ಯಮಾಪನ ಅಧ್ಯಯನಗಳನ್ನು ಪೂರ್ಣಗೊಳಿಸಿರುತ್ತದೆ
- 29 ಮೌಲ್ಯಮಾಪನ ಅಧ್ಯಯನಗಳು ಪ್ರಗತಿಯಲ್ಲಿರುತ್ತದೆ.
- ಅಗತ್ಯತೆಗೆ ಅನುಗುಣವಾಗಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿಸಲು ಪ್ರಸ್ತಾವನೆಗಳ ವಿನಂತಿಯ ದಾಖಲೆಯನ್ನು ಸುಧಾರಿಸಲಾಗಿರುತ್ತದೆ.
- 2019–20ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ/ವಿಶ್ವವಿದ್ಯಾಲಯಗಳ ಮೂಲಕವಾಗಿ 21 ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳಲು ಗುರುತಿಸಲಾಗಿರುತ್ತದೆ.

**2018–19ರಲ್ಲಿ ಸಂಪೂರ್ಣಗೊಂಡ 13 ಮೌಲ್ಯಮಾಪನ ಅಧ್ಯಯನಗಳು**

| ಕ್ರ.ಸಂ. | ಅಧ್ಯಯನದ ಹೆಸರು | ಸಂಬಂಧಿಸಿದ ಇಲಾಖೆಯ ಹೆಸರು | ಸಮಾಲೋಚಕ ಸಂಸ್ಥೆಯ ಹೆಸರು |
|---|---|---|---|
| 1 | ಕರ್ನಾಟಕದಲ್ಲಿ 2010–11ರಿಂದ 2014–15ರವರೆಗಿನ ಅವಧಿಯಲ್ಲಿ ಯಶಸ್ವಿನಿ ಸಹಕಾರ ರೈತರ ಆರೋಗ್ಯ ಆರೈಕೆ ಯೋಜನೆಯ ಮೌಲ್ಯಮಾಪನ. | ಸಹಕಾರ ಇಲಾಖೆ | ಸೆಂಟರ್ ಫಾರ್ ಸಿಂಬಿಯೋಸಿಸ್ ಆಫ್ ಟೆಕ್ನಾಲಜಿ ಎನ್ವಿರೋನ್‌ಮೆಂಟ್ ಅಂಡ್ ಮ್ಯಾನೇಜ್‌ಮೆಂಟ್ (ಎಸ್‌ಟಿಇಎಮ್) ಬೆಂಗಳೂರು |
| 2 | ಮನೆಯೊಳಗಿನ ಹಿಂಸೆಯಿಂದ ಮಹಿಳೆಯರ ರಕ್ಷಣೆಗಾಗಿ ಅಧಿನಿಯಮ 2005ರಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಿದ ಯೋಜನೆಯ ಮೌಲ್ಯಮಾಪನ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ರೂರಲ್ ಎಕಲಾಜಿಕಲ್ ಅಂಡ್ ಆಗ್ರೊ ಡವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್ ಇಂಡಿಯಾ ಧಾರವಾಡ |
| 3 | ರಾಷ್ಟ್ರೀಯ ತೋಟಗಾರಿಕಾ ಅಭಿಯಾನದಡಿ (2010–11ರಿಂದ 2012–13ರವರೆಗಿನ ಅವಧಿಯಲ್ಲಿ) ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (2012–13ರಿಂದ 2013–14ರವರೆಗಿನ ಅವಧಿಯಲ್ಲಿ) ರಕ್ಷಿತ ಕೃಷಿ ಪದ್ಧತಿಯಡಿ ಗ್ರೀನ್ ಹೌಸ್ ಕೃಷಿಯ ಮೌಲ್ಯಮಾಪನ | ತೋಟಗಾರಿಕೆ ಇಲಾಖೆ | ಇನ್‌ಸ್ಟಿಟ್ಯೂಶನ್ ಆಫ್ ಅಗ್ರಿಕಲ್ಚರಲ್ ಟೆಕ್ನಾಲಜಿಸ್ಟ್ಸ್ ಬೆಂಗಳೂರು |
| 4 | ಕರ್ನಾಟಕದಲ್ಲಿನ 104 ಆರೋಗ್ಯ ಸಹಾಯವಾಣಿ– ಆರೋಗ್ಯ ಮಾಹಿತಿ ಸಹಾಯವಾಣಿಯ ವರ್ಧನೆ ಮತ್ತು ಮಾರ್ಪಾಡುಗಳ ದೃಷ್ಟಿಕೋನದ ಸಮಕಾಲೀನ ಮೌಲ್ಯಮಾಪನ. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ | ಐಸಿಆರ್‌ಎ ಮ್ಯಾನೇಜ್‌ಮೆಂಟ್ ಕನ್‌ಸಲ್ಟಿಂಗ್ ಸರ್ವಿಸಸ್ ಲಿಮಿಟೆಡ್ ಬೆಂಗಳೂರು |
| 5 | ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯವರು ನಬಾರ್ಡ್ ಯೋಜನೆಯಡಿ 2012–13ರಿಂದ 2014–15ರವರೆಗೆ ಮಾಡಿರುವ ರಸ್ತೆ ಸುಧಾರಣೆಗಳಿಂದ ಗ್ರಾಮೀಣ ಜನರ ಮೇಲೆ ಉಂಟಾದ ಸಾಮಾಜಿಕ–ಆರ್ಥಿಕ ಪ್ರಭಾವದ ಮೌಲ್ಯಮಾಪನ. | ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ಟೆಕ್ನಿಕಲ್ ಕನ್‌ಸಲ್ಟೆನ್ಸಿ ಸರ್ವಿಸಸ್ ಆರ್ಗನೈಸೇಶನ್ ಆಫ್ ಕರ್ನಾಟಕ ಬೆಂಗಳೂರು |
| 6 | ಸಕಾಲ ಸೇವೆಗಳ ಮೌಲ್ಯಮಾಪನ. | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ) | ಇಂಡಿಯನ್ ಮಾರ್ಕೆಟ್ ರಿಸರ್ಚ್ ಬ್ಯೂರೊ ಇಂಟರ್‌ನ್ಯಾಶನಲ್ |

| ಕ್ರ.ಸಂ. | ಅಧ್ಯಯನದ ಹೆಸರು | ಸಂಬಂಧಿಸಿದ ಇಲಾಖೆಯ ಹೆಸರು | ಸಮಾಲೋಚಕ ಸಂಸ್ಥೆಯ ಹೆಸರು |
|---|---|---|---|
| 7 | ಕರ್ನಾಟಕದಲ್ಲಿ ಕೃಷಿ ಯಾಂತ್ರಿಕ ಯೋಜನೆಯ ಆಂತರಿಕ ಮೌಲ್ಯಮಾಪನ | ಕೃಷಿ ಇಲಾಖೆ | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು |
| 8 | ಇಂಧನ ಯೋಜನೆಗಾಗಿ ಎನರ್ಜಿ ಮಿಕ್ಸ್–ಕಂಪ್ಯುಟೇಷನಲ್ ಮೋಡಲ್ ಬಗ್ಗೆ ಅಧ್ಯಯನ. | ಇಂಧನ ಇಲಾಖೆ | ಸೆಂಟರ್ ಫಾರ್ ಸ್ಟಡಿ ಆಫ್ ಸೈನ್ಸ್ ಟೆಕ್ನಾಲಜಿ ಅಂಡ್ ಪಾಲಿಸಿ |
| 9 | ಸಮರ್ಥ ನೀರಾವರಿ ಪಂಪ್‌ಸೆಟ್‌ಗಳ ಮೇಲಿನ ಅಧ್ಯಯನ. | ಇಂಧನ ಇಲಾಖೆ | |
| 10 | ಸೌರ ಆಧಾರಿತ ಉತ್ಪಾದನೆಯನ್ನು ಬಳಸಿಕೊಂಡು ನೀರಾವರಿ ಪಂಪ್‌ಸೆಟ್‌ಗಳಿಗಾಗಿ ಮೀಸಲಿರಿಸಿದ ಫೀಡರ್‌ಗಳ ಅಧ್ಯಯನ. | ಇಂಧನ ಇಲಾಖೆ | |
| 11 | ಬೆಂಗಳೂರು ಮಹಾನಗರ ಸಾರಿಗೆ ನಿಗಮದ ಉಪಕ್ರಮಗಳ ಮೋಡಲ್ ಶೇರ್‌ನ ಮೌಲ್ಯಮಾಪನ ಅಧ್ಯಯನ. | ಸಾರಿಗೆ ಇಲಾಖೆ | |
| 12 | ಬೆಂಗಳೂರು ಮಹಾನಗರ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ರೈಲು ನಿಗಮ ನಿಯಮಿತ ಇವುಗಳನ್ನು ಏಕೀಕರಿಸುವುದು | ಸಾರಿಗೆ ಇಲಾಖೆ | |
| 13 | ಕರ್ನಾಟಕದಲ್ಲಿನ ನಗರಗಳ ಸಮರ್ಥನೀಯ ನಗರ ಯೋಜನಾ ಕಾರ್ಯತಂತ್ರಗಳ ಮೌಲ್ಯಮಾಪನ. | ನಗರಾಭಿವೃದ್ಧಿ ಇಲಾಖೆ | |

**2018–19ರಲ್ಲಿ ಪ್ರಗತಿಯಲ್ಲಿರುವ 29 ಮೌಲ್ಯಮಾಪನ ಅಧ್ಯಯನಗಳು**

| ಕ್ರ.ಸಂ | ಅಧ್ಯಯನದ ಹೆಸರು | ಇಲಾಖೆಯ ಹೆಸರು |
|---|---|---|
| 1 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಸ್ವ ಸಹಾಯ ಗುಂಪುಗಳ ಸ್ಥಿತಿಯ ಅಧ್ಯಯನ. | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ |
| 2 | ಕರ್ನಾಟಕದಲ್ಲಿ ರಾಜೀವ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ. | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ |
| 3 | ಕರ್ನಾಟಕದಲ್ಲಿ 2011–12ರಿಂದ 2016–17ರವರೆಗೆ ಆಯ್ದ ಕ್ರೀಡೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಮಧ್ಯಪ್ರವೇಶದ ಪ್ರಭಾವದ ಮೌಲ್ಯಮಾಪನ | ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ |
| 4 | ಕರ್ನಾಟಕದಲ್ಲಿ ನೇರ ಲಾಭ ವರ್ಗಾವಣೆ ಯೋಜನೆಯ ಸ್ಥಿತಿ ಮತ್ತು ಕಾರ್ಯಕ್ಷಮತೆಯ ಅಧ್ಯಯನ. | ಆರ್ಥಿಕ ಇಲಾಖೆ |
| 5 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹುಡುಗರು ಮತ್ತು ಹುಡುಗಿಯರಿಗಾಗಿ ವಿತರಿಸಿದ ಶುಚಿ ಸಂಭ್ರಮ ಕಿಟ್‌ನ ಮೌಲ್ಯಮಾಪನ. | ಸಮಾಜ ಕಲ್ಯಾಣ ಇಲಾಖೆ |

| ಕ್ರಸಂ | ಅಧ್ಯಯನದ ಹೆಸರು | ಇಲಾಖೆಯ ಹೆಸರು |
|---|---|---|
| 6 | ಕರ್ನಾಟಕದ ಪ್ರದೇಶಗಳಾದ್ಯಂತ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರಗಳ ಕಾರ್ಯನಿರ್ವಹಣೆಯ ತುಲನಾತ್ಮಕ ಅಧ್ಯಯನ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |
| 7 | ಸಾರ್ವಜನಿಕ ಆರೋಗ್ಯ ಸೌಲಭ್ಯಗಳಿಗಾಗಿ ಹೆರಿಗೆ ಆರೋಗ್ಯ ಆರೈಕೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಂದ ಮಾಡಲ್ಪಟ್ಟ ತಮ್ಮ ಸ್ವಂತ ವೆಚ್ಚದ ಬಗ್ಗೆ ಅಧ್ಯಯನ. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |
| 8 | ರಾಷ್ಟ್ರೀಯ ಮಾಹಿತಿ ಕೇಂದ್ರ ಕರ್ನಾಟಕ ಅಭಿವೃದ್ಧಿ ಪಡಿಸಿದ ಇ–ಆಸ್ಪತ್ರೆ ಸಾಫ್ಟ್‌ವೇರ್ ಬಳಕೆಯ ಅಧ್ಯಯನ. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ – ರಾಷ್ಟ್ರೀಯ ಮಾಹಿತಿ ಅಭಿಯಾನ |
| 9 | ಕರ್ನಾಟಕ ರಾಜ್ಯದಲ್ಲಿ ದೀನ ದಯಾಳು ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಮೌಲ್ಯಮಾಪನ. | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. |
| 10 | 2013–14ರಿಂದ 2016–17ರವರೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಡಿ ನಿರ್ಮಿಸಲಾದ ಜಾನುವಾರು ಕೊಟ್ಟಿಗೆಗಳ ಮೌಲ್ಯಮಾಪನ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. |
| 11 | ಕರ್ನಾಟಕದಲ್ಲಿ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಯ ಕಲ್ಯಾಣ ಉಪಕರದ ಬಳಕೆಯ ಪರಿಣಾಮದ ಅಧ್ಯಯನ | ಕಾರ್ಮಿಕ ಇಲಾಖೆ–<br>ಕರ್ನಾಟಕದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿ |
| 12 | ಕರ್ನಾಟಕ ರಾಜ್ಯದಲ್ಲಿ ಹಿರಿಯ ನಾಗರಿಕರ ಸ್ಥಿತಿಗತಿಯ ಅಧ್ಯಯನ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>ವಿಕಲಾಂಗರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯ ಮತ್ತು ಸಾಮಾಜಿಕ ಭದ್ರತೆ ಮತ್ತು ನಿವೃತ್ತಿ ವೇತನದ ನಿರ್ದೇಶನಾಲಯ |
| 13 | ಕರ್ನಾಟಕದಲ್ಲಿ 2014–15ರಿಂದ 2016–17ರ ಅವಧಿಗೆ ಪರಿಶಿಷ್ಟ ಜಾತಿಗಳ ಉಪಹಂಚಿಕೆ/ ಪರಿಶಿಷ್ಟ ಪಂಗಡಗಳ ಉಪಹಂಚಿಕೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳ ಮೂಲ ಸೌಕರ್ಯ ಸೌಲಭ್ಯಗಳ ಯೋಜನೆಯ ಕಾರ್ಯಕ್ಷಮತೆಯ ಮೌಲ್ಯಮಾಪನ | ಸಮಾಜ ಕಲ್ಯಾಣ ಇಲಾಖೆ |
| 14 | ಕರ್ನಾಟಕದಲ್ಲಿ 2016–17ರಲ್ಲಿ ಮಧ್ಯಾಹ್ನದ ಬಿಸಿ ಊಟ ಯೋಜನೆಯ ಮೌಲ್ಯಮಾಪನ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ |
| 15 | 2011–12ರಿಂದ 2015–16ರವರೆಗೆ ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಿದ ಅರಿವು–ಶಿಕ್ಷಣ ಸಾಲ ಯೋಜನೆಯ ಮೌಲ್ಯಮಾಪನ | ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ<br>ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ |
| 16 | ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಹಕ್ಕು ಅಧಿನಿಯಮ 2009ರ ಪ್ರಕಾರ ಖಾಸಗಿ ಶಾಲೆಗಳಲ್ಲಿನ ಮೂಲಸೌಲಭ್ಯಗಳ ಮತ್ತು ಅರ್ಹತಾಸ್ಥಿತಿಗಳ ಮೌಲ್ಯಮಾಪನ. | ಶಿಕ್ಷಣ ಇಲಾಖೆ<br>(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ) |
| 17 | 2013–14ರಿಂದ 2015–16ರವರೆಗೆ ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆಯಡಿ, 2013–14 ರಿಂದ 2014–15 ರವರೆಗೆ 13ನೇ ಹಣಕಾಸು ಆಯೋಗದಡಿ, 2013–14ರಿಂದ 2016–17ರವರೆಗೆ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮದಡಿ ಮತ್ತು 2013–14 ರಿಂದ 2016–17 ವರೆಗೆ ರಾಷ್ಟ್ರೀಯ ಬಿದಿರು ಅಭಿಯಾನದಡಿ ಅರಣ್ಯ ಕಾಮಗಾರಿಗಳ ಮೌಲ್ಯಮಾಪನ | ಅರಣ್ಯ ಇಲಾಖೆ |

| ಕ್ರ.ಸಂ | ಅಧ್ಯಯನದ ಹೆಸರು | ಇಲಾಖೆಯ ಹೆಸರು |
|---|---|---|
| 18 | 2013–14ರಿಂದ 2016–17ರ ಅವಧಿಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯಡಿ ಅರಣ್ಯೀಕರಣ ಕಾಮಗಾರಿಗಳ ಮೌಲ್ಯಮಾಪನ | ಅರಣ್ಯ ಇಲಾಖೆ |
| 19 | ವಿಜಯಪುರ ಜಿಲ್ಲೆಯಲ್ಲಿ ಬೇಟಿ ಬಚಾವೂ ಬೇಟಿ ಪಡಾವೋ ಯೋಜನೆಯ ಮೌಲ್ಯಮಾಪನ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |
| 20 | ಕರ್ನಾಟಕದಲ್ಲಿನ ಕನ್ನಡ ಮತ್ತು ಸಂಸ್ಕೃತಿಯ ಪ್ರಚಾರಕ್ಕಾಗಿ ಸಂಘಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಒದಗಿಸಲಾದ ನಿಧಿಗಳ ಬಳಕೆಯ ಮೌಲ್ಯಮಾಪನ. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 21 | ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಥವಾ ಇತರ ಸಂಸ್ಥೆಗಳಿಂದ ಪ್ರಾರಂಭಿಸಲ್ಪಟ್ಟ ಸ್ವ ಸಹಾಯ ಗುಂಪುಗಳ ಮೇಲೆ ಅನಾಣ್ಯೀಕರಣದ ಪರಿಣಾಮದ ಮೌಲ್ಯಮಾಪನ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |
| 22 | ಕರ್ನಾಟಕದಲ್ಲಿನ ಸಣ್ಣ ಪ್ರಮಾಣದ ಉದ್ದಿಮೆಗಳ ಮೇಲೆ ಅನಾಣ್ಯೀಕರಣದ ಪರಿಣಾಮದ ಮೌಲ್ಯಮಾಪನ. | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ |
| 23 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನಾ ಪದ್ಧತಿಯ ಆರಂಭದಿಂದ ಕೂಲಿ ಮತ್ತು ವಸ್ತುಗಳನ್ನು ಇ–ಎಫ್‌ಎಂಎಸ್ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಪೂರೈಕೆದಾರರಿಗೆ) ಪಾತಿಸಿರುವುದರ ಬಗ್ಗೆ ಮೌಲ್ಯಮಾಪನ. | ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. |
| 24 | 2017–18ರಲ್ಲಿ ಬೆಳಗಾವಿ ಮತ್ತು ಮೈಸೂರು ಕಂದಾಯ ವಿಭಾಗಗಳಲ್ಲಿ ಕರ್ನಾಟಕ ರಾಜ್ಯ ಕೃಷಿ ತಂತ್ರಜ್ಞಾನ ನಿರ್ವಹಣಾ ಏಜೆನ್ಸಿ ಯೋಜನೆಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಅಧ್ಯಯನ. | ಕೃಷಿ ಇಲಾಖೆ |
| 25 | 2017–18ರಲ್ಲಿ ಬೆಂಗಳೂರು ಮತ್ತು ಕಲಬುರಗಿ ಕಂದಾಯ ವಿಭಾಗಗಳಲ್ಲಿ ಕರ್ನಾಟಕ ರಾಜ್ಯ ಕೃಷಿ ತಂತ್ರಜ್ಞಾನ ನಿರ್ವಹಣಾ ಏಜೆನ್ಸಿ ಯೋಜನೆಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಅಧ್ಯಯನ. | ಕೃಷಿ ಇಲಾಖೆ |
| 26 | ಕಲಬುರಗಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ನಿರಂತರ ಜ್ಯೋತಿ ಯೋಜನೆಯ ಮೌಲ್ಯಮಾಪನ. | ಕಲಬುರಗಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಲಬುರಗಿ, ಇಂಧನ ಇಲಾಖೆ |
| 27 | ಕರ್ನಾಟಕ ರಾಜ್ಯದಲ್ಲಿ ಕೃಷಿ ಯಂತ್ರ ಧಾರೆ ಯೋಜನೆಯ (ಕ್ಷೇತ್ರ ಯಂತ್ರಗಳ ರೂಢೀಗತ ಬಾಡಿಗೆ ಸೇವಾ ಕೇಂದ್ರಗಳ) ಮೌಲ್ಯಮಾಪನ. | ತೋಟಗಾರಿಕೆ, ಕೃಷಿ, ಮತ್ತು ರೇಶ್ಮೆ ಇಲಾಖೆ |
| 28 | ಕರ್ನಾಟಕದಲ್ಲಿ 2006–07ರಿಂದ 2017–18ರವರೆಗಿನ ಅವಧಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಓದುತ್ತಿರುವ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್‌ಗಳ ಸರಬರಾಜು ಮಾಡುವ ಯೋಜನೆಯ ಮೌಲ್ಯಮಾಪನ. | ಶಿಕ್ಷಣ ಇಲಾಖೆ<br>(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ) |
| 29 | ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಪ್ರಕ್ರಿಯೆಗಳು ಮತ್ತು ತಂತ್ರಜ್ಞಾನ ಸಹಾಯಕ ಕಲಿಕಾ ಕಾರ್ಯಕ್ರಮದ ಸಾಧನೆಯ ಸಮಕಾಲೀನ ಮೌಲ್ಯಮಾಪನ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ– ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ |

## 2019–20ರಲ್ಲಿ ಕೈಗೊಳ್ಳಲು ಗುರುತಿಸಲಾದ 21 ಮೌಲ್ಯಮಾಪನ ಅಧ್ಯಯನಗಳು

| ಕ್ರ. ಸಂ. | ಇಲಾಖೆ | ಯೋಜನೆಯ ಹೆಸರು |
|---|---|---|
| 1 | ಸಹಕಾರ ಇಲಾಖೆ | ಸ್ವಸಹಾಯ ಗುಂಪುಗಳು ಪಡೆದ ಸಾಂಸ್ಥಿಕ ಸಾಲಗಳ ರೀತಿಯ ಮೌಲ್ಯಮಾಪನ |
| 2 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಕರ್ನಾಟಕದಲ್ಲಿ ನಲಿ ಕಲಿ ಕಾರ್ಯಕ್ರಮದ ಅನುಷ್ಠಾನದ ಸಾಧನ ಮತ್ತು ಪರಿಕ್ಷಾ ಫಲಿತಾಂಶದ ವಿಶ್ವಾಸಾರ್ಹತೆಯ ಸ್ಥೂಲ ಅಧ್ಯಯನದ ಮೌಲ್ಯಮಾಪನ |
| 3 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಕರ್ನಾಟಕದ ಬೀದರ್ ಜಿಲ್ಲೆಯ ಮತ್ತು ಉತ್ತರ ಮೈಸೂರು ಕ್ಷೇತ್ರಗಳಲ್ಲಿನ ನಲಿ ಕಲಿ ಕಾರ್ಯಕ್ರಮದ ವ್ಯವಸ್ಥಿತ ವಿಫಲತೆಗಳು ಮತ್ತು ಅಡೆತಡೆಗಳನ್ನು ಅರ್ಥೈಸುವ ಬಗ್ಗೆ ಮೌಲ್ಯಮಾಪನ |
| 4 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಲಸಿಕೆ ಕಾರ್ಯಕ್ರಮದ ಪ್ರಗತಿಯ ಮೌಲ್ಯಮಾಪನ |
| 5 | ತೋಟಗಾರಿಕೆ ಇಲಾಖೆ | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿನಿ ಯೋಜನೆಯ ಒಂದು ಹನಿ ಹೆಚ್ಚು ಬೆಳೆ (ಸೂಕ್ಷ್ಮ ನೀರಾವರಿ) ಘಟಕದಡಿ 2017–18ರ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಮೌಲ್ಯಮಾಪನ |
| 6 | ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ– ಅಲ್ಪ ಸಂಖ್ಯಾತರ ಇಲಾಖೆ | ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆಯ ನಿಗಮದಿಂದ ಅನುಷ್ಠಾನಗೊಳಿಸಲ್ಪಟ್ಟ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಮತ್ತು ಅಲ್ಪ ಸಾಮಾಜಿಕ–ಆರ್ಥಿಕ ಕಲ್ಯಾಣ ಯೋಜನೆಗಳ ಮೌಲ್ಯಮಾಪನ |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ | ವಿವಿಧ ಗ್ರಾಮ ನೀರು ಸರಬರಾಜು ಯೋಜನೆಗಳ ಮೌಲ್ಯಮಾಪನ |
| 8 | ಪ್ರವಾಸೋದ್ಯಮ ಇಲಾಖೆ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು, ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವ ಯೋಜನೆಯ ಮೌಲ್ಯಮಾಪನ |
| 9 | ಕೃಷಿ ಇಲಾಖೆ–<br>ಜಲಾನಯನ ಅಭಿವೃದ್ಧಿ ಇಲಾಖೆ | ರಾಷ್ಟ್ರೀಯ ಅಭಿಯಾನದ ಸುಸ್ಥಿರ ಕೃಷಿಯಡಿ ಕರ್ನಾಟಕದಲ್ಲಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ ಮೌಲ್ಯಮಾಪನ |
| 10 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮಹಿಳಾ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಹಣಕಾಸು ಆಯೋಗದ ಮೂಲಕ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಂಡಿರುವ ಬಡ್ಡಿ ಸಹಾಯಧನ ಯೋಜನೆಯ ಮೌಲ್ಯಮಾಪನ |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಕರ್ನಾಟಕದಲ್ಲಿ ಮಹಿಳೆಯರಿಗೆ ಸ್ವೀಕಾರ ಕೇಂದ್ರಗಳಲ್ಲಿ ಮತ್ತು ಸ್ಟೇಟ್ ಹೋಂಗಳ ಮತ್ತು ಗೆಳತಿ ವಿಶೇಷ ಆರೈಕೆ ಘಟಕದ ಮೌಲ್ಯಮಾಪನ |
| 12 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮೌಲ್ಯಮಾಪನ |

| ಕ್ರ. ಸಂ. | ಇಲಾಖೆ | ಯೋಜನೆಯ ಹೆಸರು |
|---|---|---|
| 13 | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಸರ್ಕಾರದಿಂದ ಅನುದಾನಿತ ಮತ್ತು ಅನುದಾನ ರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ತರಬೇತುದಾರರಿಗೆ ಲ್ಯಾಪ್‌ಟಾಪ್‌ಗಳ ಪರಿಣಾಮ ಮತ್ತು ಬಳಕೆಯ ಬಗ್ಗೆ ಮೌಲ್ಯಮಾಪನ. |
| 14 | ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಇಲಾಖೆ | ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳ ವಸತಿಗೃಹಗಳ ಕಾರ್ಯಚಟುವಟಿಕೆ ಮತ್ತು ಪರಿಣಾಮದ ಮೌಲ್ಯಮಾಪನ (2014–15 ರಿಂದ 2018–19) |
| 15 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ– ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿ | ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಯ ಜೈವಿಕ ಇಂಧನ ಸಂಶೋಧನಾ ಮಾಹಿತಿ ಮತ್ತು ಪ್ರದರ್ಶನ ಕೇಂದ್ರಗಳ ಮೌಲ್ಯಮಾಪನ |
| 16 | ಕೃಷಿ ಇಲಾಖೆ | ಕೃಷಿ ಇಲಾಖೆಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅನುಷ್ಠಾನಗೊಳಿಸಲಾದ ಮೂಲಸೌಕರ್ಯ ಯೋಜನೆಗಳ ಮೌಲ್ಯಮಾಪನ |
| 17 | ಕೃಷಿ ಇಲಾಖೆ | ಕರ್ನಾಟಕದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅನುಷ್ಠಾನಗೊಳಿಸಲಾದ ಫಲಾನುಭವಿ ಆಧಾರಿತ ಯೋಜನೆಗಳ ಮೌಲ್ಯಮಾಪನ |
| 18 | ಅರಣ್ಯ ಇಲಾಖೆ | ಮಾನವ ಮತ್ತು ಪ್ರಾಣಿಗಳ ನಡುವಿನ ಸಂಘರ್ಷ – ಕಳೆದ 30 ವರ್ಷಗಳಿಂದ ಅಳವಡಿಸಲಾದ ಅದರ ತಗ್ಗಿಸುವಿಕೆಯ ವಿಧಾನಗಳು ಮತ್ತು ಅದರ ಪರಿಣಾಮಗಳ (ಪರಿಣಾಮಕಾರಿತ್ವ, ಸಂಘರ್ಷದ ಸ್ಥಳಗಳು, ಪ್ರಾದೇಶಿಕ ಪ್ರಸರಣ ಮತ್ತು ಕಾಲಾನುಗತ ಸರಣಿಯನುಸಾರ ಒದಗಿಸುವ ಎಕ್ಸ್–ಗ್ರೇಷಿಯಾ ಪಾವತಿಗಳಂತಹ ಸಮಸ್ಯೆಗಳನ್ನು ಒಳಗೊಂಡ) ಮೌಲ್ಯಮಾಪನ |
| 19 | ಅರಣ್ಯ ಇಲಾಖೆ | ಕರ್ನಾಟಕ ರಾಜ್ಯದಲ್ಲಿನ ಕೃಷಿ ಹವಾಮಾನ ವಲಯಗಳಲ್ಲಿ ಗಿಡ ಮರಗಳು ಬದುಕಿ ಉಳಿಯುವ, ಪರಿಣಾಮಕಾರಿತ್ವದ, ಉತ್ಪಾದಕತೆಯ ಮತ್ತು ಜಾತಿಗಳ ಪ್ರಸ್ತುತತೆಯನ್ನು ಗಮನಹರಿಸುವ ಮೂಲಕ ಪ್ಲಾಂಟೇಶನ್ ಚಟುವಟಿಕೆಯ ಪ್ರಭಾವದ ಮೌಲ್ಯಮಾಪನ. |
| 20 | ಅರಣ್ಯ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಮರದ ಮಾರಾಟಗಳು, ಆದಾಯ ಬೇಡಿಕೆ ಅಂದಾಜು ಮತ್ತು ಇತರ ಸಂಬಂಧಿತ ಚಟುವಟಿಕೆಗಳ ಮೇಲೆ ಅರಣ್ಯ ಇಲಾಖೆಯಲ್ಲಿನ ಇ–ಹರಾಜು ವೇದಿಕೆಯ ಪರಿಣಾಮ ಮತ್ತು ಅಂದಾಜು ಕುರಿತ ಮೌಲ್ಯಮಾಪನ. |
| 21 | ಅರಣ್ಯ ಇಲಾಖೆ | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಅಧಿನಿಯಮವನ್ನು ಮತ್ತು ಅಭಿವೃದ್ಧಿಪಡಿಸಲಾದ ಟೆಂಡರ್ ಪ್ರಕ್ರಿಯೆಗಳನ್ನು ಅರಣ್ಯೀಕರಣ ಮತ್ತು ಅರಣ್ಯ ಇಲಾಖೆಯ ಸಂಬಂಧಿತ ಕಾಮಗಾರಿಗಳಲ್ಲಿ ಕಾರ್ಯಗತಗೊಳಿಸಲು ಬಳಸಿದ ಬಗ್ಗೆ ಪರಿಣಾಮಕಾರಿತ್ವ ಮತ್ತು ಅನುಸರಣೆಯ ಮೌಲ್ಯಮಾಪನ. |

**2018–19ರ ಪ್ರಗತಿಯ ಸಂಕ್ಷಿಪ್ತ ನೋಟ**

| ವಿವರಗಳು | ಅಧ್ಯಯನಗಳ ಸಂಖ್ಯೆ |
|---|---|
| ಸಂಪೂರ್ಣಗೊಂಡ ಅಧ್ಯಯನಗಳ ಸಂಖ್ಯೆ | 13 |
| ಪ್ರಸ್ತುತ ಪ್ರಗತಿಯಲ್ಲಿರುವ ಅಧ್ಯಯನಗಳ ಸಂಖ್ಯೆ | 29 |
| 2019–20 ರಲ್ಲಿ ಹೊಸದಾಗಿ ಕೈಗೊಳ್ಳಲು ಗುರುತಿಸಲಾದ ಅಧ್ಯಯನಗಳು | 21 |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಸಾಧಿಸಿದ ಪ್ರಗತಿ**


ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಮೂಲಕ 126 ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳಲಾಗಿರುತ್ತದೆ.

| **ವರ್ಷ** | **ಅಧ್ಯಯನಗಳ ಸಂಖ್ಯೆ** |
|---|---|
| 2011-12 | 03 |
| 2012-13 | 17 |
| 2013-14 | 16 |
| 2014-15 | 14 |
| 2015-16 | 10 |
| 2016-17 | 30 |
| 2017-18 | 23 |
| 2018-19 | 13 |
| **ಒಟ್ಟು** | **126** |

**ಇಲಾಖಾವಾರು ಕೈಗೊಂಡ ಮೌಲ್ಯಮಾಪನ ಅಧ್ಯಯನಗಳು**

ಈ ಅಧ್ಯಯನಗಳು ಮಹಿಳೆಯರ ಸಮಸ್ಯೆಗಳ ಮೇಲೆ, ಜೀವನೋಪಾಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಕೇಂದ್ರೀಕರಿಸಲ್ಪಟ್ಟಿರುತ್ತವೆ. ಮಾನವ ಅಭಿವೃದ್ಧಿಯನ್ನು ಉತ್ತೇಜಿಸುವ ಯೋಜನೆಗಳ ಮೇಲಿನ ಮೌಲ್ಯಮಾಪನವು ಇತ್ತೀಚಿನ ವರ್ಷಗಳಲ್ಲಿ ಗಮನವನ್ನು ಸೆಳೆಯುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೆಚ್ಚಿನ ಸಂಖ್ಯೆಯ ಅಧ್ಯಯನಗಳನ್ನು ಹೊಂದಿರುತ್ತದೆ.

**ಇಲಾಖಾವಾರು ಸಂಪೂರ್ಣಗೊಂಡ ಅಧ್ಯಯನಗಳು**




**ಇಲಾಖಾವಾರು ಇದುವರೆಗೆ ಪೂರ್ಣಗೊಳಿಸಿದ 126 ಮೌಲ್ಯಮಾಪನ ಅಧ್ಯಯನಗಳು**

## ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳ ವೇಳಾಪಟ್ಟಿ

ನಿಗದಿಪಡಿಸಿದಂತೆ ವಿವಿಧ ಕಾಲಾವಧಿಯಲ್ಲಿ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ವಿವಿಧ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ. ಕೆಳಗೆ ಸೂಚಿಸಿದ ಸಮಯದ ಪ್ರಕಾರ ಚಟುವಟಿಕೆಗಳ ವೇಳಾಪಟ್ಟಿಯನ್ನು ನಿರ್ವಹಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಶ್ರಮಿಸುತ್ತದೆ.

| ಕ್ರ.ಸಂ | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳು | ತಿಂಗಳುಗಳು (ಏಪ್ರಿಲ್‌ನಿಂದ ಮಾರ್ಚ್) | | | | | | | | | | | |
|---|---|---|---|---|---|---|---|---|---|---|---|---|---|
| | | 4 | 5 | 6 | 7 | 8 | 9 | 10 | 11 | 12 | 1 | 2 | 3 |
| 1 | ಎಲ್ಲಾ ಇಲಾಖೆಗಳಿಗೆ ವಿನಂತಿಸಿಕೊಂಡು ಪ್ರಸಾವನೆಗಳನ್ನು ಪಡೆದುಕೊಳ್ಳುವುದು. | | | | | | | | | | | | |
| | ಆಡಳಿತ ಮಂಡಳಿಯ ಸಭೆ ನಡೆಸುವುದು | | | | | | | | | | | | |
| 3 | ಶಾಸನ ಬದ್ಧ ಲೆಕ್ಕ ಪರಿಶೋಧನೆ ನಡೆಸುವುದು | | | | | | | | | | | | |
| 4 | ತಾಂತ್ರಿಕ ಸಮಿತಿ ಸಭೆ ನಡೆಸುವುದು | | | | | | | | | | | | |
| 5 | ಉಲ್ಲೇಖ ನಿಯಮಗಳನ್ನು ತಯಾರಿಸುವುದು. | | | | | | | | | | | | |
| 6 | ಸಾಮಾನ್ಯ ಮಂಡಳಿಯ ಸಭೆ ನಡೆಸುವುದು | | | | | | | | | | | | |
| 7 | ತರಬೇತಿ ಮತ್ತು ಕಾರ್ಯಾಗಾರ ಕೈಗೊಳ್ಳುವುದು | | | | | | | | | | | | |
| 8 | ಪ್ರಸ್ತಾವನೆಗಾಗಿ ಕೋರಿಕೆಯನ್ನು ಆಹ್ವಾನಿಸುವುದು, ಟೆಂಡರ್ ಪರಿಶೀಲಿಸುವುದು | | | | | | | | | | | | |
| 9 | ಸಿಬ್ಬಂದಿಗಳ ನೇಮಕಾತಿ ಮತ್ತು ಇಂಟರ್ನ್‌ಶಿಪ್‌ಗಾಗಿ ಜಾಹಿರಾತು ಹೊರಡಿಸುವುದು. (ಬೇಡಿಕೆಗೆ ಅನುಸಾರವಾಗಿ) | | | | | | | | | | | | |
| 10 | ಪ್ರಾರಂಭಿಕ ವರದಿ, ಕ್ಷೇತ್ರ ಭೇಟಿಗಳು ಕರಡು ಮೌಲ್ಯಮಾಪನ ವರದಿ, ಅಂತಿಮ ವರದಿಗಳ ಬಗ್ಗೆ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಮಾಸಿಕ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡುವುದು. | | | | | | | | | | | | |

**ಹೊಸ ಉಪಕ್ರಮಗಳು**

**ಸರ್ಕಾರಿ ಇಲಾಖೆಗಳಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮ**

- ಕರ್ನಾಟಕ ಸರ್ಕಾರದ ಸಂಬಂಧಿತ ಸರ್ಕಾರಿ ಇಲಾಖೆಗಳು, ನಿಗಮಗಳು, ಮಂಡಳಿಗಳು, ಸಂಸ್ಥೆಗಳು, ಪ್ರಾಧಿಕಾರಗಳು ಈ ಕಾರ್ಯಕ್ರಮವನ್ನು ಜಾರಿಗೊಳಿಸಬೇಕು.
- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಈ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಸಂಘಟಿಸುವ ಮತ್ತು ಅನುಷ್ಠಾನಗೊಳಿಸುವ ಸಂಪರ್ಕಸಂಸ್ಥೆಯಾಗಿದೆ.
- ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಯವರು ಆಯಾ ಇಲಾಖೆಯಲ್ಲಿ ಈ ಇಂಟರ್ನ್‌ಶಿಪ್ ಕಾರ್ಯಕ್ರಮದ ನೋಡಲ್ ಆಫೀಸರ್ ಆಗಿರುತ್ತಾರೆ.
- ಈ ಕಾರ್ಯಕ್ರಮದಡಿ ಭಾರತದಲ್ಲಿ ಅಥವಾ ವಿದೇಶದಲ್ಲಿ ಅಂಗೀಕೃತ ವಿಶ್ವವಿದ್ಯಾಲಯ/ಸಂಸ್ಥೆಯಲ್ಲಿ ದಾಖಲಾದ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಅಥವಾ ಸಂಶೋಧನಾ ತಜ್ಞರುಗಳನ್ನು ವಿವಿಧ ಹಂತಗಳ ಸರ್ಕಾರಿ ಇಲಾಖೆಗಳು ಮತ್ತು ಜಿಲ್ಲಾ ಮಟ್ಟದಲ್ಲಿನ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತ್‌ಗಳ ಕಚೇರಿಗಳಲ್ಲಿ ಇಂಟರ್ನ್‌ಗಳಾಗಿ ಸೇರಿಸಿಕೊಳ್ಳಲಾಗುತ್ತದೆ.
- ಈ ಇಂಟರ್ನ್‌ಶಿಪ್‌ದಾರರನ್ನು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ತರಬೇತಿಗಾಗಿ ಸೇರಿಸಿಕೊಳ್ಳಲಾಗುತ್ತದೆ ಮತ್ತು ಅವರನ್ನು ಪ್ರಾಯೋಗಿಕ ಮಾಹಿತಿ ಸಂಗ್ರಹಣೆಗೆ ಮತ್ತು ಆಂತರಿಕ ಮತ್ತು ಇತರ ಮಾಹಿತಿಗಳ ಸಂಯೋಜನೆಯಲ್ಲಿ ತೊಡಗಿಸುವುದರ ಮೂಲಕ ಇಲಾಖೆಗಳೊಳಗಿನ ವಿಶ್ಲೇಷಣೆಯ ಪ್ರಕ್ರಿಯೆಗೆ ಪೂರಕವಾಗುವುದನ್ನು ನಿರೀಕ್ಷಿಸಲಾಗುತ್ತದೆ.

**ಕಾರ್ಯಕ್ರಮದ ಮುಖ್ಯ ಉದ್ದೇಶಗಳು ಹೀಗಿವೆ:**

- ಯುವ ಶೈಕ್ಷಣಿಕ ಪ್ರತಿಭೆಗಳನ್ನು ಕರ್ನಾಟಕ ಸರ್ಕಾರದಲ್ಲಿ ಒಳಗೊಳ್ಳಲು ಪರಸ್ಪರ ಅನುಕೂಲವಾಗುವಂತೆ ಅನುಮತಿಸುವುದು.
- ಯುವ ವಿದ್ಯಾರ್ಥಿಗಳ ಮತ್ತು ಸಂಶೋಧಕರ ಸಾಮರ್ಥ್ಯ ನಿರ್ಮಾಣವನ್ನು ಉತ್ತೇಜಿಸಲು ವಿವಿಧ ಕಾರ್ಯಕ್ರಮಗಳ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಮತ್ತು ಸರ್ಕಾರಿ ಇಲಾಖೆಗಳ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯನಿರ್ವಹಣೆಯೊಂದಿಗೆ ಇಂಟರ್ನ್‌ದಾರರಿಗೆ ಅಲ್ಪಾವಧಿ ತರಬೇತಿಯನ್ನು ನೀಡುವುದು.
- ಅಭಿವೃದ್ಧಿಯ ಯೋಜನೆಗಳು ಮತ್ತು ನೀತಿಗಳನ್ನು ಪುನರ್ವಿನ್ಯಾಸಗೊಳಿಸುವ ಮತ್ತು ಸೇವಾ ವಿತರಣೆಯನ್ನು ಸುಧಾರಿಸಲು ಹೊಸ ಆಲೋಚನೆಗಳನ್ನು ಮತ್ತು ನಾವೀನ್ಯತೆಗಳನ್ನು ತರಲು ಈ ಇಂಟರ್ನ್‌ಗಳನ್ನು ಪ್ರಚೋದಿಸುವುದು
- ಕರ್ನಾಟಕ ಸರಕಾರದಲ್ಲಿ ಸರ್ಕಾರಿ ಕಾರ್ಯ ನಿರ್ವಹಣೆ ಮತ್ತು ಅಭಿವೃದ್ಧಿ ನೀತಿ ವಿಚಾರಗಳ ಕುರಿತು ಅರಿಯಲು ಈ ಇಂಟರ್ನ್‌ಗಳಿಗೆ ಅವಕಾಶವನ್ನು ಒದಗಿಸಲು ಮತ್ತು ಅವರಿಂದ ಪ್ರಾಯೋಗಿಕ ವಿಶ್ಲೇಷಣೆ, ವರದಿಗಳನ್ನು ಸಂಕ್ಷಿಪ್ತಗೊಳಿಸಿ ನೀತಿ ಪತ್ರಗಳು ಮುಂತಾದ ಪಾಲಿಸಿ ಒಳಹರಿವುಗಳನ್ನು ತಯಾರಿಸುವ ಮೂಲಕ ನೀತಿ ಸೂತ್ರೀಕರಣಕ್ಕೆ ಕೊಡುಗೆ ಪಡೆಯುವುದು.
- ಇದು ವಿದ್ಯಾರ್ಥಿಗಳಿಗೆ ಅವರ ಭವಿಷ್ಯದ ಆಸಕ್ತಿಗಳನ್ನು ಉತ್ತೇಜಿಸುವಲ್ಲಿ ಅನುಭವವನ್ನು ಸೇರಿಸುತ್ತದೆ.
- ಪಾವತಿ ಇಲ್ಲದ ಆಧಾರದ ಮೇಲೆ ಈ ಇಂಟರ್ನ್ಸ್‌ಶಿಪ್ ಇರುತ್ತದೆ ಮತ್ತು ಇಂಟರ್ನ್ಸ್‌ಶಿಪ್ ಅವಧಿಯು ಆರು ವಾರಗಳಿಂದ ಎರಡು ತಿಂಗಳವರೆಗೆ ಇರುತ್ತದೆ.
- ಆನ್‌ಲೈನ್ ಅರ್ಜಿಗಳು ಮತ್ತು ಆಯ್ಕೆ ಇರುತ್ತದೆ.

**ಫೆಲೋಷಿಪ್ ಕಾರ್ಯಕ್ರಮ**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 5 ನೇ ಸಾಮಾನ್ಯ ಮಂಡಳಿಯ ಸಭೆಯಲ್ಲಿ ಪ್ರಧಾನ ಮಂತ್ರಿ ಗ್ರಾಮೀಣಾಭಿವೃದ್ಧಿ ಫೆಲೋಶಿಪ್‌ಗಳ/ಮುಖ್ಯಮಂತ್ರಿಯವರ ನಗರ ನಾಯಕರ ಫೆಲೋಶಿಪ್ ಕಾರ್ಯಕ್ರಮದ ರೀತಿಯಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಹಾಯ ಮಾಡಲು ಫೆಲೋಶಿಪ್ ಕಾರ್ಯಕ್ರಮವನ್ನು ಪರಿಚಯಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ನೀತಿ, ಸಂಶೋಧನೆ ಮತ್ತು ವಿಶ್ಲೇಷಣೆಯಲ್ಲಿ. ಇದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ತಮ್ಮ ಸಂಶೋಧನಾ ಕಾರ್ಯಕ್ರಮಗಳಲ್ಲಿ ಸಹಾಯ ಮಾಡುತ್ತದೆ. ರಾಜ್ಯದ ವಿಶ್ವವಿದ್ಯಾಲಯಗಳು/ಸಂಸ್ಥೆಗಳೊಂದಿಗೆ ಸೇರಿ ತಂಡವನ್ನು ರೂಪಿಸಲು ಪ್ರಸ್ತಾವನೆಯನ್ನು ಸಿದ್ಧಪಡಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ತಿಳಿಸಲಾಗಿರುತ್ತದೆ. ಇದರನ್ವಯ, ಈ ಕಾರ್ಯಕ್ರಮವನ್ನು ಬೆಂಬಲಿಸಲು ನೋಡಲ್ ಶೈಕ್ಷಣಿಕ ಸಂಸ್ಥೆಯನ್ನು ಗುರುತಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಉನ್ನತ ಶಿಕ್ಷಣ ಇಲಾಖೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ.

**ಸಂಶೋಧನೆ ಮತ್ತು ಮೌಲ್ಯಮಾಪನ– ರಾಜ್ಯ ವಿಶ್ವವಿದ್ಯಾನಿಲಯಗಳ ಸಾಮರ್ಥ್ಯ ನಿರ್ಮಾಣ**

ಸಾಮಾನ್ಯ ಮಂಡಳಿಯು ನೀಡಿದ ನಿರ್ದೇಶನಗಳ ಪ್ರಕಾರ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ರಾಜ್ಯ ವಿಶ್ವವಿದ್ಯಾಲಯಗಳೊಂದಿಗೆ ಮೌಲ್ಯಮಾಪನ ಅಧ್ಯಯನಗಳಲ್ಲಿ ಸಂಶೋಧನೆ ಮತ್ತು ಮೌಲ್ಯಮಾಪನದಲ್ಲಿ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಲು ತೊಡಗಿಸಿಕೊಂಡಿದೆ. ವಿಜಯಪುರ ಜಿಲ್ಲೆಯ ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯ ಮೌಲ್ಯಮಾಪನವನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರದ ಮೂಲಕ ತೆಗೆದುಕೊಳ್ಳಲಾಗಿದೆ. ಇದಲ್ಲದೆ, ಮುಂದಿನ ವರ್ಷಗಳಲ್ಲಿ ತೆಗೆದುಕೊಳ್ಳಬೇಕಾದ 50 ಮೌಲ್ಯಮಾಪನ ಅಧ್ಯಯನಗಳಲ್ಲಿ, 25 ಅಧ್ಯಯನಗಳನ್ನು ವಿಶ್ವವಿದ್ಯಾಲಯಗಳ ಮೂಲಕ ಮಾಡಲಾಗುವುದು.

**ಮಧ್ಯಸ್ಥಿಕೆಗಳನ್ನು ಉತ್ತೇಜಿಸುವ ಗುಣಮಟ್ಟ**

ಮೌಲ್ಯಮಾಪನ ಅಧ್ಯಯನಗಳ ಉಪಯುಕ್ತತೆಯನ್ನು ಹೆಚ್ಚಿಸಲು ಮತ್ತು ಸರ್ಕಾರದ ಉಪಕ್ರಮ ಆಧಾರಿತ ನೀತಿಯನ್ನು ಮಾಡುವಲ್ಲಿ ನೆರವಾಗಲು, ಬಲವಾದ ವಿಧಾನ ಮತ್ತು ಮೂಲಾಧಾರಿತ ವಾಸ್ತವತೆಗಳ ಮೇಲೆ ಗುಣಮಟ್ಟದ ಮೌಲ್ಯಮಾಪನ ವರದಿಗಳನ್ನು ತಯಾರಿಸುವುದು ಅತ್ಯವಶ್ಯಕವಾಗಿರುತ್ತದೆ. ಗುಣಮಟ್ಟ ಮೌಲ್ಯಮಾಪನವನ್ನು ಉತ್ತೇಜಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಅನೇಕ ಉಪಕ್ರಮಗಳನ್ನು ಕೈಗೊಂಡಿರುತ್ತದೆ. ಪ್ರಮುಖ ಕ್ರಮಗಳನ್ನು ಈ ಕೆಳಗೆ ನೀಡಲಾಗಿದೆ.

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಮತ್ತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳಿಗೆ ಮೌಲ್ಯಮಾಪನದ ವಿವಿಧ ಹಂತಗಳಲ್ಲಿ ಒಳಹರಿವು/ಸಲಹೆಗಳನ್ನು ಒದಗಿಸಲು ತಯಾರಿಸಲಾದ ಎಲ್ಲಾ ಬಗೆಯ ಕ್ಷೇತ್ರಗಳಲ್ಲಿನ ತಜ್ಞರ ಸಮಗ್ರ ಪಟ್ಟಿಗೆ ಆಡಳಿತ ಮಂಡಳಿಯು ಅನುಮೋದನೆಯನ್ನು ನೀಡಿರುತ್ತದೆ.
- ವಿವಿಧ ಮೌಲ್ಯಮಾಪನ ಅಧ್ಯಯನಗಳ ಉಲ್ಲೇಖ ನಿಯಮಗಳಲ್ಲಿ ಸರಿಯಾದ ಮಾದರಿಯ ವಿನ್ಯಾಸವನ್ನು ರೂಪಿಸಲು ಸರ್ಕಾರಿ ಆದೇಶ ಸಂ ಪಿಡಿ 102 ಪಿಎಸ್‌ಡಿ 2015, ಬೆಂಗಳೂರು ದಿನಾಂಕ: 04.01.2016ರನ್ವಯ ಒಂದು ಸಮಿತಿಯನ್ನು ರಚಿಸಲಾಗಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಮಿತಿಯು ಅಧ್ಯಯನಕ್ಕಾಗಿ ಯಾದೃಚ್ಛಿಕ ಮಾದರಿಯನ್ನು ರೂಪಿಸುತ್ತದೆ.
- ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳು ತಯಾರಿಸಿದ ಪ್ರಶ್ನಾವಳಿಗಳನ್ನು ಈ ಸಮಿತಿಯು ಸಹಾ ಸಿದ್ಧಪಡಿಸುತ್ತದೆ/ ಪರಿಶೀಲಿಸುತ್ತದೆ. 2018–19ರಲ್ಲಿ ಈ ಸಮಿತಿಯು ಮೌಲ್ಯಮಾಪನ ಅಧ್ಯಯನಕ್ಕಾಗಿ ಮಾದರಿ ವಿನ್ಯಾಸದಲ್ಲಿ ತೊಡಗಿಸಿಕೊಂಡಿತ್ತು.
- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಸಮಾಲೋಚಕರಿಂದ ಮತ್ತು ಸ್ವತಂತ್ರ ಮೌಲ್ಯಮಾಪಕರಿಂದ/ ವಿಷಯ ಪರಿಣಿತರಿಂದ ಕರಡು ಮೌಲ್ಯಮಾಪನ ವರದಿಯನ್ನು ಪರಿಶೀಲಿಸಲಾಗುತ್ತದೆ. ಇದನ್ನು ಇಲಾಖೆಗೂ ಸಹಾ ಅದರ ಟೀಕೆಗಳು/ಸಲಹೆಗಳಿಗಾಗಿ ಕಳುಹಿಸಲಾಗುತ್ತದೆ. ನಂತರದಲ್ಲಿ ಎಲ್ಲರಿಂದ ನೀಡಲ್ಪಟ್ಟ ಟೀಕೆಗಳ ಪ್ರಕಾರವಾಗಿ ಈ ವರದಿಯನ್ನು ಪರಿಷ್ಕರಿಸಲಾಗುತ್ತದೆ. ನಂತರ ಅದರ ಅನುಮೋದನೆ/ಪರಿಷ್ಕರಣೆಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನಕ್ಕೆ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುತ್ತದೆ.
- ಅಧ್ಯಯನ ತಂಡದ ಸದಸ್ಯರ ಶೈಕ್ಷಣಿಕ ಅರ್ಹತೆಯ ಗುಣಮಟ್ಟ ಅಂಶಗಳನ್ನು ಕಂಡುಹಿಡಿಯಲು ಪ್ರಸ್ತಾವನಾ ವಿನಂತಿಯನ್ನು ಪರಿಷ್ಕರಿಸಲಾಗಿರುತ್ತದೆ. ಇದಲ್ಲದೆ, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯಮಾಪನ ಅಧ್ಯಯನಗಳು ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಗಳಲ್ಲಿ ಬಾಕಿ ಉಳಿದಿದ್ದರೆ ಅಂತಹ ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಗಳು ಟೆಂಡರ್‌ನಲ್ಲಿ (ಪ್ರಸ್ತಾವನಾ ವಿನಂತಿಯನ್ನು/ಆಸಕ್ತಿಯನ್ನು ವ್ಯಕ್ತಪಡಿಸುವ ಕೋರಿಕೆಯನ್ನು ಸಲ್ಲಿಸಲು) ಭಾಗವಹಿಸಲು ಅರ್ಹರಾಗುವುದಿಲ್ಲ. ಉತ್ತಮ ಗುಣಮಟ್ಟದ ಅಧ್ಯಯನವನ್ನು ಸಕಾಲದಲ್ಲಿ ಪೂರ್ಣಗೊಳಿಸುವುದನ್ನು ಇದು ಖಚಿತಪಡಿಸುತ್ತದೆ.

**ಆಡಳಿತ ಮಂಡಳಿ ಮತ್ತು ತಾಂತ್ರಿಕ ಸಮಿತಿಯ ಪುನರ್‌ರಚನೆ**

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ ಸದಸ್ಯರ ಪುನರ್‌ರಚನೆ**

(ಸರ್ಕಾರಿ ಆದೇಶ ಸಂಖ್ಯೆ: ಪಿಡಿ 170 ಪಿಎಸ್‌ಡಿ 2018, ಬೆಂಗಳೂರು, ದಿನಾಂಕ: 01.01.2019)

| ಕ್ರ.ಸಂ | ಪದನಾಮ ಮತ್ತು ವಿಳಾಸ | ಸಮಿತಿಯಲ್ಲಿ ಪದನಾಮ |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |
| 2 | ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು |
| 3 | ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚಗಳು), ಅಥವಾ ಅವರ ನಾಮನಿರ್ದೇಶಿತರು | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಥವಾ ಅವರ ನಾಮನಿರ್ದೇಶಿತರು | ಸದಸ್ಯರು |
| 5 | ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ | ಸದಸ್ಯರು |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯರು |
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 9 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 10 | ಉಪ ಕುಲಪತಿಗಳು, ಅಜೀಂ ಪ್ರೇಂಜೀ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ನಾಮನಿರ್ದೇಶಿತರು | ತಜ್ಞರು |
| 11 | ಪ್ರೊ. ಮಾದೇಶ್ವರನ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣಾ ಅಧ್ಯಯನ ಸಂಸ್ಥೆ, ಬೆಂಗಳೂರು | ತಜ್ಞರು |
| 12 | ಪ್ರೊ. ಹೆಚ್ ಎನ್ ಚಾಣಾಕ್ಯ, ಹಿರಿಯ ಸಂಶೋಧನಾ ವಿಜ್ಞಾನಿ, ಸುಸ್ಥಿರ ತಂತ್ರಜ್ಞಾನಗಳ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು | ತಜ್ಞರು |
| 13 | ಪ್ರೊ. ಅಬ್ದುಲ್ ಅಜೀಜ್, ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಬೆಂಗಳೂರು | ತಜ್ಞರು |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯ ಪುನರ್‌ರಚನೆ**

(ಸರ್ಕಾರಿ ಆದೇಶ ಸಂಖ್ಯೆ: ಪಿಡಿ 170 ಪಿಎಸ್‌ಡಿ 2018, ಬೆಂಗಳೂರು, ದಿನಾಂಕ: 06.02.2019)

| ಕ್ರ.ಸಂ | ಪದನಾಮ ಮತ್ತು ಸದಸ್ಯರ ವಿಳಾಸ | ಸಮಿತಿಯಲ್ಲಿ ಪದನಾಮ |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |
| 2 | ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ಬೆಂಗಳೂರು ಅಥವಾ ಅವರ ನಾಮನಿರ್ದೇಶಿತರು | ಸದಸ್ಯರು |
| 3 | ನಿರ್ದೇಶಕರು, ರಾಷ್ಟ್ರೀಯ ಮುಂದುವರಿದ ಅಧ್ಯಯನಗಳ ಸಂಸ್ಥೆ, ಬೆಂಗಳೂರು | ಸದಸ್ಯರು |
| 4 | ಮುಖ್ಯಸ್ಥರು, ಸಾರ್ವಜನಿಕ ನೀತಿ ವಿಭಾಗ, ಭಾರತೀಯ ನಿರ್ವಹಣಾ ಸಂಸ್ಥೆ, ಬೆಂಗಳೂರು | ಸದಸ್ಯರು |
| 5 | ಉಪ ಮಹಾ ನಿರ್ದೇಶಕರು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ, ಪ್ರಾದೇಶಿಕ ಕಛೇರಿ, ಬೆಂಗಳೂರು | ಸದಸ್ಯರು |
| 6 | ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು |
| | **ತಜ್ಞ ಸದಸ್ಯರು– ಸಹ ಆಯ್ಕೆದಾರರು** | |
| 7 | ಡಾ. ಸರಸು ಥಾಮಸ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ | ಸದಸ್ಯರು |
| 8 | ಡಾ. ಎಸ್ ಐಯಪ್ಪನ್, ಹಿಂದಿನ ಮಹಾ ನಿರ್ದೇಶಕರು, ಭಾರತೀಯ ಕೃಷಿ ಸಂಶೋಧನಾ ಮಂಡಳಿ, ಕುಲಪತಿಗಳು, ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ ಇಂಫಾಲ್ ನಬಾರ್ಡ್ ಚೇರ್ ಪ್ರೊಫೆಸರ್ | ಸದಸ್ಯರು |
| 9 | ಡಾ. ಎಸ್ ಆರ್ ಕೇಶವ, ಬೆಂಗಳೂರು ವಿಶ್ವವಿದ್ಯಾಲಯ | ಸದಸ್ಯರು |
| 10 | ಡಾ. ಸ್ಮಿತಾ ಶ್ರೀನಿವಾಸ, ಅಂತರ್‌ರಾಷ್ಟ್ರೀಯ ಆರ್ಥಿಕ ಸಂಬಂಧಗಳ ಮೇಲಿನ ಸಂಶೋಧನೆಯ ಭಾರತೀಯ ಮಂಡಳಿ, ಬೆಂಗಳೂರು | ಸದಸ್ಯರು |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಪುನರ್‌ವಿನ್ಯಾಸಗೊಳಿಸುವುದು**

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ವಿಭಾಗಗಳನ್ನು ರಚಿಸುವುದು**

ಸರ್ಕಾರದ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನದ ಪರಿಣಾಮಕಾರಿತ್ವದ ಮತ್ತು ಪರಿಣಾಮಕಾರಿಯಾದ ಆಚರಣೆಯನ್ನು ಪಾರದರ್ಶಕತೆಯಾಗಿರಿಸುವುದು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಗುರಿಯಾಗಿರುತ್ತದೆ. ಉತ್ಪನ್ನಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು, ಈ ಪ್ರಾಧಿಕಾರವು ನಿರ್ವಹಿಸುವ ಕಾರ್ಯಾಚರಣೆಯನ್ನು ವಿವಿಧ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುವ ಅವಶ್ಯಕತೆಯಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಕೆಳಗಿನ ವಿಭಾಗಗಳನ್ನು ರಚಿಸಬೇಕಾಗಿರುತ್ತದೆ:

1. ಮೌಲ್ಯಮಾಪನ ವಿಭಾಗ
2. ಸಂಗ್ರಹಣೆ ಮತ್ತು ಸಮನ್ವಯತೆಯ ವಿಭಾಗ
3. ಪ್ರಕಟಣೆ ಮತ್ತು ವಿಸ್ತರಣೆ ವಿಭಾಗ
4. ಸಾಂಖ್ಯಿಕ ವಿಶ್ಲೇಷಣೆ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗ

ಮೌಲ್ಯಮಾಪನ ವಿಭಾಗವು ಮೂಲತಃ ಮೌಲ್ಯಮಾಪನಕ್ಕಾಗಿ ಯೋಜನೆಗಳನ್ನು ಗುರುತಿಸುವುದು, ಆಡಳಿತ ಮಂಡಳಿಯ ಅನುಮೋದನೆಗಾಗಿ ಅವುಗಳನ್ನು ಮಂಡಿಸುವುದು, ಸಂಬಂಧಿಸಿದ ಇಲಾಖೆಗಳಿಂದ ಪರಿಕಲ್ಪನಾ ಟಿಪ್ಪಣಿಯನ್ನು ಪಡೆಯುವುದು, ಯೋಜನೆಯ ಅನುಷ್ಠಾನಗೊಳಿಸುವ ನೋಡಲ್ ಅಧಿಕಾರಿಗಳೊಂದಿಗೆ ಸಹಕರಿಸಿ ಉಲ್ಲೇಖ ನಿಯಮಗಳನ್ನು ತಯಾರಿಸುವುದು ಮತ್ತು ತಾಂತ್ರಿಕ ಸಮಿತಿಯಿಂದ ಅನುಮೋದನೆಯನ್ನು ಪಡೆಯುವುದಲ್ಲದೇ ಮೌಲ್ಯಮಾಪನ ವರದಿಗಳನ್ನು ಪಡೆದಾಗಲೆಲ್ಲಾ ಪರಿಶೀಲಿಸುವುದು ಇವುಗಳನ್ನು ಕೇಂದ್ರೀಕರಿಸುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನಾಧಿಕಾರಿಗಳು ಹಂಚಿದ ಕಾರ್ಯಗಳನುಸಾರವಾಗಿ, ಸಂಗ್ರಹಣೆ ಮತ್ತು ಸಮನ್ವಯತೆಯ ವಿಭಾಗವು ಮೌಲ್ಯಮಾಪನ ಅಧ್ಯಯನಕ್ಕಾಗಿ ಆಸಕ್ತಿಯನ್ನು ಅಭಿವ್ಯಕ್ತಿಪಡಿಸಲು/ ಪ್ರಸ್ತಾವನೆಯ ವಿನಂತಿಗಾಗಿ ಅಧಿಸೂಚನೆಗಳನ್ನು ಹೊರಡಿಸುವುದು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಸರಕು ಮತ್ತು ಸೇವೆಗಳನ್ನು ಸಂಗ್ರಹಿಸಲು ಅಧಿಸೂಚನೆಗಳನ್ನು ಹೊರಡಿಸುವುದು, ಸಂಬಂಧಿಸಿದ ಇಲಾಖೆಗಳು ಮತ್ತು ಪಟ್ಟಿಮಾಡಲಾದ ಸಮಾಲೋಚಕ ಸಂಸ್ಥೆಗಳಿಂದ ವರದಿಗಳನ್ನು ಸಲ್ಲಿಸುವಂತೆ ಒತ್ತಾಯಿಸುವುದು ಈ ಎಲ್ಲಾ ಕಾರ್ಯಗಳನ್ನು ಕೈಗೊಳ್ಳುತ್ತದೆ.

ಪ್ರಕಟಣೆ ಮತ್ತು ವಿಸ್ತರಣೆ ವಿಭಾಗವು ಮೌಲ್ಯಮಾಪನ ಅಧ್ಯಯನ ವರದಿಯಲ್ಲಿನ ಕಾಗುಣಿತ ಪರಿಶೀಲನೆ, ವ್ಯಾಕರಣ, ಪುರಾವೆ ಓದುವಿಕೆ, ಮೌಲ್ಯಮಾಪನ ವರದಿಗಳನ್ನು ಸರಿಪಡಿಸುವುದು, ವಿವಿಧ ಹಂತಗಳಲ್ಲಿ ತಪ್ಪುಗಳನ್ನು, ಅಸಮರ್ಥತೆ, ಕೃತಿಚೌರ್ಯವನ್ನು ಗುರುತಿಸಲು ಕೇಂದ್ರೀಕರಿಸಲು. ವಿಭಿನ್ನ ಮಧ್ಯಸ್ಥಗಾರರ ಸಾಮರ್ಥ್ಯದ ನಿರ್ಮಾಣಕ್ಕಾಗಿ ಮತ್ತು ನಡೆಸುವ ಅನುವಾದ ಮತ್ತು ಸಂಬಂಧಿತ ಇತರ ಕಾರ್ಯಗಳಿಗೆ ತರಬೇತಿ ನೀಡಲು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳನ್ನು ಪ್ರಸಾರ ಮಾಡಲು ಕೈಪಿಡಿಗಳು, ಹ್ಯಾಂಡ್ ಬುಕ್, ಸುದ್ದಿಪತ್ರಗಳು, ಇತರೆ ಸಂಬಂಧಿತ ಪುಸ್ತಕಗಳನ್ನು ಹೊರತರಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಉದ್ದೇಶಿಸಿರುತ್ತದೆ.

ಸಾಂಖ್ಯಿಕ ವಿಶ್ಲೇಷಣೆ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗವು ಸಮಾಲೋಚಕ ಸಂಸ್ಥೆಗಳು ಸಂಗ್ರಹಿಸಿದ ಪ್ರಾಥಮಿಕ ಮತ್ತು ದ್ವಿತೀಯಕ ದತ್ತಾಂಶವನ್ನು ಪರಿಶೀಲಿಸುವುದು ತಂತ್ರಜ್ಞಾನದ ಆಯ್ಕೆಗಳನ್ನು ಅನ್ವೇಷಿಸಿ, ದತ್ತಾಂಶ ವಿಶ್ಲೇಷಣೆ ಮಾಡುವುದು ಎಲ್ಲಾ ಸಂಬಂದಿಸಿದ ದತ್ತಾಂಶವನ್ನು ವೆಬ್‌ಸೈಟ್– ಪೋರ್ಟಲ್, ಮೊಬೈಲ್ ಅನ್ವಯಿಕೆಗಳು ಮುಂತಾದವುಗಳನ್ನು ನಿರ್ವಹಿಸುವುದು ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಎಲ್ಲಾ ಸಂಬಂದಿಸಿದ ದತ್ತಾಂಶವನ್ನು ಮತ್ತು ಮೌಲ್ಯಮಾಪನ ವರದಿಗಳನ್ನು ಅದರ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವುದು.

**ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಇತರ ಯೋಜನೆಗಳು**

- ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಇದರೊಡನೆ 169 ಗುರಿಗಳನ್ನು ಸೇರಿರುವ 'ನಮ್ಮ ವಿಶ್ವವನ್ನು ಪರಿವರ್ತಿಸುವುದು: ಸುಸ್ಥಿರ ಅಭಿವೃದ್ಧಿ 2030 ಕಾರ್ಯಸೂಚಿ" ಎಂಬ ಶೀರ್ಷಿಕೆಯ ದಾಖಲೆಯನ್ನು 25 ನೇ ಸೆಪ್ಟೆಂಬರ್ 2015 ರಂದು ಜರುಗಿದ ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯ 70 ನೇ ಅಧಿವೇಶನದ ಪ್ರಕಾರ. ಸುಸ್ಥಿರ ಅಭಿವೃದ್ಧಿ ಗುರಿಗಳು ಬಡತನದ ಮೂಲ ಕಾರಣಗಳನ್ನು ಎದುರಿಸುವುದು ಮಾತ್ರವಲ್ಲದೇ ಎಲ್ಲರಿಗೂ ಘನತೆಯ ಜೀವನವನ್ನು ಒದಗಿಸುವ ಸಾರ್ವತ್ರಿಕ ಅಗತ್ಯತೆಗಳನ್ನೂ ಒದಗಿಸಲು ಪ್ರಯತ್ನಿಸುತ್ತಿವೆ. ಕರ್ನಾಟಕ ರಾಜ್ಯವು ಸುಸ್ಥಿರ ಅಭಿವೃದ್ಧಿ ಗುರಿಗಳ ಹಾಗೂ ಲಕ್ಷ್ಯಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಕೈಗೊಂಡಿರುತ್ತದೆ. ಕರ್ನಾಟಕದಲ್ಲಿ 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗಾಗಿ ವಸ್ತುಸ್ಥಿತಿ ವರದಿಯನ್ನು ಸಿದ್ಧಪಡಿಸಲು ಮತ್ತು ಕಾರ್ಯ ತಂತ್ರಗಳನ್ನು ರೂಪಿಸಲು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಬೆಂಬಲಿಸುತ್ತಿದೆ.
- ಭಾರತದ ಆವಿಷ್ಕಾರ ಸೂಚ್ಯಂಕ, ವ್ಯಾಪಾರವನ್ನು ಸುಲಭವಾಗಿಸುವ ಸೂಚ್ಯಂಕ, ಸುಲಭವಾಗಿ ಬದುಕುವ ಸೂಚ್ಯಂಕ ಇತ್ಯಾದಿ ನೀತಿ ಆಯೋಗದ ಇತರೆ ಉಪಕ್ರಮಗಳನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಬೆಂಬಲಿಸಿರುತ್ತದೆ.
- ಕರ್ನಾಟಕ ರಾಜ್ಯ ಮಾನವ ಅಭಿವೃದ್ಧಿ ವರದಿಯ ಸಿದ್ಧಪಡಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಬೆಂಬಲಿಸಿರುತ್ತದೆ ಮತ್ತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾನವ ಅಭಿವೃದ್ಧಿ ವರದಿಯನ್ನು ಸಿದ್ಧಪಡಿಸುವುದರಲ್ಲಿ ತೊಡಗಿರುತ್ತದೆ.
- ಕರ್ನಾಟಕದಲ್ಲಿನ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಮಹಾತ್ವಕಾಂಕ್ಷೆಯ ಜಿಲ್ಲೆಗಳನ್ನಾಗಿ ಪರಿವರ್ತಿಸಲು ಸಹಾ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಮನ್ವಯಿಸುತ್ತಿದೆ.
- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮದಡಿಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ನಾಲ್ಕು ವಿದ್ಯಾರ್ಥಿಗಳು ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯಿಂದ ಓರ್ವ ವಿದ್ಯಾರ್ಥಿ ಮತ್ತು ಪಿಇಎಸ್‌ಐಟಿಯಿಂದ ಓರ್ವ ಎಂಜಿನಿಯರಿಂಗ್ ವಿದ್ಯಾರ್ಥಿ ತಮ್ಮ ಇಂಟರ್ನ್‌ಶಿಪ್‌ನ್ನು ಪೂರ್ಣಗೊಳಿಸಿರುತ್ತಾರೆ.

**ಮೌಲ್ಯಮಾಪನದ ಪರಿಣಾಮ–ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ಕ್ರಮ**

ಮೌಲ್ಯಮಾಪನ ಫಲಿತಾಂಶವನ್ನು ಪರಿಣಾಮಕಾರಿಯಾಗಿ ಬಳಸಲು ಮೌಲ್ಯಮಾಪನ ವರದಿಗಳನ್ನು ಸಂಬಂಧಿಸಿದ ಇಲಾಖೆಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ ಮತ್ತು ಕ್ರಮ ಕೈಗೊಂಡ ವರದಿಗಳನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಕಳುಹಿಸಲು ಮನವೊಲಿಸಲಾಗುತ್ತದೆ. 55 ಮೌಲ್ಯಮಾಪನ ಅಧ್ಯಯನಗಳಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಇಲಾಖೆಗಳು ಕ್ರಮ ಕೈಗೊಂಡ ವರದಿಗಳನ್ನು ಕಳುಹಿಸಿರುತ್ತಾರೆ. ಯೋಜನೆಯ ಮೌಲ್ಯಮಾಪನ ಅಧ್ಯಯನದಲ್ಲಿ ಶಿಫಾರಸ್ಸು ಮಾಡಲಾದ ಕೆಲವು ಬದಲಾವಣೆಗಳನ್ನು ಸರ್ಕಾರವು ಜಾರಿಗೆ ತಂದಿರುತ್ತದೆ. ಇದಕ್ಕೆ ಈ ಕೆಳಗಿನವು ಕೆಲವು ಉದಾಹರಣೆಗಳಾಗಿರುತ್ತವೆ.

- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಜಾರಿಗೊಳಿಸಿದ ದೇವದಾಸಿ ಪುನರ್ವಸತಿ ಕಾರ್ಯಕ್ರಮ ಕುರಿತಾದ ಮೌಲ್ಯಮಾಪನ ಅಧ್ಯಯನವು ಮಾಜಿ ದೇವದಾಸಿಗಳಿಗೆ ಪ್ರಾಯೋಗಿಕ ಆದಾಯದ ಚಟುವಟಿಕೆಗಳನ್ನು ಕೈಗೊಳ್ಳಲು ಪರಿಚಯಿಸಬೇಕೆಂದು ಸೂಚಿಸಿದೆ. ಸದರಿ ಅಧ್ಯಯನದ ಶಿಫಾರಸ್ಸಿನಂತೆ, 2017–18ರ ಆಯವ್ಯಯ ಭಾಷಣದಲ್ಲಿ ಆದಾಯ ಚಟುವಟಿಕೆಗಳಿಗೆ ದೇವದಾಸಿಗಳಿಗೆ ನೀಡಲಾಗುವ ಆರ್ಥಿಕ ನೆರವನ್ನು ರೂ. 50,000 (ರೂ. 25000 ಸಹಾಯಧನ + ರೂ. 25000 ಸಾಲ)ವನ್ನು ಹೆಚ್ಚಿಸಲಾಗಿರುತ್ತದೆ. ಇನ್ನೊಂದು ಶಿಫಾರಸ್ಸಿನಂತೆ ಮಾಜಿ ದೇವದಾಸಿಗಳಿಗೆ ಪಿಂಚಣಿ ಮೊತ್ತವನ್ನು ಹೆಚ್ಚಿಸಲಾಗಿರುತ್ತದೆ. ಇವರಿಗೆ ಫೆಬ್ರವರಿ 2017 ರಿಂದ ಸರ್ಕಾರವು ಪಿಂಚಣಿ ಮೊತ್ತವನ್ನು ರೂ. 1000ದಿಂದ ರೂ. 1500 ಹೆಚ್ಚಿಸಿರುತ್ತದೆ. ಇದರಿಂದಾಗಿ 28737 ಮಾಜಿ ದೇವದಾಸಿ ಮಹಿಳೆಯರಿಗೆ ಅನುಕೂಲವಾಗಿರುತ್ತದೆ.
- ರಾಷ್ಟ್ರೀಯ ತೋಟಗಾರಿಕಾ ಅಭಿಯಾನ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (2010–11 ರಿಂದ 2013–14ರವರೆಗೆ) ಕೃಷಿ ಸಂರಕ್ಷಣೆಯ ರಚನೆಯ ಗ್ರೀನ್ ಹೌಸ್ ಕೃಷಿ ಕುರಿತಾದ ಮೌಲ್ಯಮಾಪನ ಅಧ್ಯಯನದಲ್ಲಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಗುಣಮಟ್ಟದ ಮಧ್ಯಸ್ಥಿಕೆಗಳು ಮತ್ತು ಪಾರದರ್ಶಕತೆ ಬಗ್ಗೆ ಮಾಡಲಾದ ಹಲವು ಸಲಹೆಗಳನ್ನು ಅಳವಡಿಸಲಾಗಿರುತ್ತದೆ. ತೆಂಗಿನ ಗೊಬ್ಬರ ಮತ್ತು ಜಲ ಕೃಷಿಗಾಗಿ ಕಡಿಮೆ ಮಣ್ಣಿನಲ್ಲಿ ಪ್ರಾಯೋಗಿಕ ಯೋಜನೆಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಏಕ ಗ್ರಾಮ ಸಮೂಹಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ಕಾಲುವೆ/ಸುರಂಗ ಕೃಷಿ ತಂತ್ರಗಳನ್ನು ಪರಿಶೀಲನೆಯಲ್ಲಿರುತ್ತದೆ. ತೋಟಗಾರಿಕಾ ಬೆಳೆ ರಚನೆಗಳಿಗಾಗಿ ಮೌಲ್ಯ ಸರಪಳಿ ಮತ್ತು ಶೀತ ಸರಪಳಿಯನ್ನು ರಚಿಸುವುದರಲ್ಲಿ ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯ ಬಾಗಲಕೋಟೆಯಿಂದ ಒಂದು ಅಧ್ಯಯನ ವರದಿಯನ್ನು ಪ್ರಾರಂಭಿಸಲಾಗಿರುತ್ತದೆ. ಹೊಸ ಸಾಫ್ಟ್‌ವೇರ್ ಹೆಚ್‌ಬಿಎಂಎಸ್‌ನ್ನು ಆನ್‌ಲೈನ್‌ನಲ್ಲಿ ನೋಂದಣಿ ಮಾಡಲು, ಅನುಮೋದನೆ ನೀಡಲು ಮತ್ತು ಸಹಾಯಧನವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲು ಪರಿಚಯಿಸಲಾಗಿರುತ್ತದೆ.

**ಪಟ್ಟಿಯಲ್ಲಿ ಸೇರಿಸುವುದು (ಎಂಪೆನೆಲ್‌ಮೆಂಟ್)**

2018–19ರಲ್ಲಿ ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರದ ಜೊತೆಯಲ್ಲಿ 35 ಪಟ್ಟಿಮಾಡಲಾದ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳು ಮತ್ತು 11 ಸ್ವತಂತ್ರ ಮೌಲ್ಯಮಾಪಕರು ಮೌಲ್ಯಮಾಪನ ವರದಿಗಳನ್ನು ಮೌಲ್ಯಮಾಪನ ಮಾಡಲು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳಲ್ಲಿ 42 ವಿಷಯ ತಜ್ಞರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳನ್ನು ಮತ್ತು ಸ್ವತಂತ್ರ ಮೌಲ್ಯಮಾಪಕರನ್ನು ಪಟ್ಟಿ (ಎಂಪೆನಲ್‌ಮೆಂಟ್) ಮಾಡುವ ಸಮಿತಿಯನ್ನು ರಚಿಸಲಾಗಿರುತ್ತದೆ. ಅರ್ಹ ಸಂಸ್ಥೆಗಳನ್ನು ಮತ್ತು ಸ್ವತಂತ್ರ ಮೌಲ್ಯಮಾಪಕರನ್ನು (ಎಂಪನಲ್) ಮಾಡಲು ಈ ಸಮಿತಿಯು ಮೂರು ತಿಂಗಳಿಗೊಮ್ಮೆ ಸೇರುತ್ತದೆ.

ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರವು ತನ್ನ ತಾಂತ್ರಿಕ ಸಮಿತಿ, ಆಡಳಿತ ಮಂಡಳಿ ಮತ್ತು ಸಾಮಾನ್ಯ ಮಂಡಳಿ ಸಭೆಗಳ ಕಾರ್ಯಸೂಚಿ ಮತ್ತು ನಡವಳಿಗಳನ್ನು ಎಲ್ಲಾ ಅಧ್ಯಯನಗಳ ಉಲ್ಲೇಖ ನಿಯಮಗಳ ಜೊತೆಗೆ ಹಾಗೂ ಅಂತಿಮ ಮೌಲ್ಯಮಾಪನ ವರದಿಗಳನ್ನೂ ಅದರ ವೆಬ್ ಸೈಟ್‌ನಲ್ಲಿ ನವೀಕರಿಸಿರುತ್ತದೆ.

**ಜರುಗಿಸಿದ ಸಭೆಗಳು**

ಸಾಮಾನ್ಯ ಮಂಡಳಿ ಸಭೆಗಳು, ಆಡಳಿತ ಮಂಡಳಿ ಸಭೆಗಳು ಮತ್ತು ತಾಂತ್ರಿಕ ಸಮಿತಿ ಸಭೆಗಳು ಈ ಕೆಳಗಿನ ದಿನಾಂಕಗಳಲ್ಲಿ ಜರುಗಿರುತ್ತವೆ:

| ಸಾಮಾನ್ಯ ಮಂಡಳಿ ಸಭೆಗಳು | ಆಡಳಿತ ಮಂಡಳಿ ಸಭೆ | ತಾಂತ್ರಿಕ ಸಮಿತಿ ಸಭೆ |
|---|---|---|
| ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರದ 5ನೇ ಸಾಮಾನ್ಯ ಮಂಡಳಿ ಸಭೆಯು ದಿ: 12–10–2018 ರಂದು ಜರುಗಿರುತ್ತದೆ | ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರದ 16ನೇ ಆಡಳಿತ ಮಂಡಳಿ ಸಭೆಯು ದಿ: 16–07–2018ರಂದು ಮತ್ತು 17ನೇ ಆಡಳಿತ ಮಂಡಳಿ ಸಭೆಯು ದಿ: 05–01–2019ರಂದು ಜರುಗಿರುತ್ತದೆ | ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರದ 41ನೇ ತಾಂತ್ರಿಕ ಸಮಿತಿ ಸಭೆಯು ದಿ: 07–05–2018ರಂದು ಮತ್ತು 42ನೇ ತಾಂತ್ರಿಕ ಸಮಿತಿ ಸಭೆಯು ದಿ: 23–08–2018 ರಂದು ಜರುಗಿರುತ್ತದೆ |

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು 2018–19ರಲ್ಲಿ ಪಡೆದ ನಿಧಿಗಳು/ಆದಾಯ**

2018–19ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ರೂ.160 ಲಕ್ಷ ಆಯವ್ಯಯ ಹಂಚಿಕೆಯಾಗಿದ್ದು ಬಿಡುಗಡೆಯಾಗಿರುತ್ತದೆ. 31–03–2019ರ ಅಂತ್ಯಕ್ಕೆ ರೂ.635.34 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳಲು ಹಲವಾರು ಇಲಾಖೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ರೂ. 102.22 ಲಕ್ಷಗಳನ್ನು ಅವುಗಳ ಪರವಾಗಿ ಭಾಗಶ:/ಪೂರ್ಣ ಮೌಲ್ಯಮಾಪನ ವೆಚ್ಚದ ಹಣವನ್ನು ನೀಡಿರುತ್ತವೆ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ತನ್ನ ನಿಧಿಯ ಹೆಸರಿನಲ್ಲಿ ಸಂಖ್ಯೆ 64084919361ರ ಒಂದು ಉಳಿತಾಯ ಬ್ಯಾಂಕ್ ಖಾತೆಯನ್ನು ಬಹುಮಹಡಿ ಕಟ್ಟಡ, ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹೊಂದಿದ್ದು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನಾಧಿಕಾರಿಗಳು ಮತ್ತು ಆಡಳಿತಾಧಿಕಾರಿಯಿಂದ ಜಂಟಿಯಾಗಿ ಇದು ನಿರ್ವಹಿಸಲ್ಪಡುತ್ತಿದ್ದು ಈ ಖಾತೆಗೆ ಹಣದ ಸ್ವೀಕೃತಿಗಳನ್ನು ಜಮಾ ಮಾಡಲಾಗುತ್ತಿದೆ.

**31–03–2019ರಂದು ಇದ್ದಂತೆ 2018–19ರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸ್ವೀಕೃತಿಗಳ ವಿವರಣಾ ಪಟ್ಟಿ**

| ಕ್ರ.ಸಂ | ಸ್ವೀಕೃತಿ ವಿವರ | ಮೊಬಲಗು ರೂ,ಗಳಲ್ಲಿ |
|---|---|---|
| 1 | ಪ್ರಾರಂಭಿಕ ಶಿಲ್ಕು (01–04–2018) | 11,78,13,000.00 |
| 2 | ರಾಜ್ಯ ಸರ್ಕಾರದಿಂದ ಅನುದಾನ | 1,60,00,000.00 |
| 3 | ಅರಣ್ಯ ಇಲಾಖೆಯಿಂದ ಬಂದ ಅನುದಾನ | 1,02,21,763.00 |
| 4 | ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ | 69,82,138.00 |
| 5 | ವಿಶೇಷ ಅಭಿವೃದ್ಧಿ ಯೋಜನೆಗಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ನೀಡಲಾದ ಮುಂಗಡ ಹಣದಲ್ಲಿ ಮರುಪಾವತಿ | 17,000.00 |
| 6 | ಇತರೆ (ಸಂಸ್ಕರಣಾ ಶುಲ್ಕ ಇತ್ಯಾದಿ) | 28,750.00 |
| | **ಒಟ್ಟು** | **15,10,62,651.00** |

**31–03–2019ರಂದು ಇದ್ದಂತೆ 2018–19ರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವೆಚ್ಚದ ವಿವರಣಾ ಪಟ್ಟಿ**

| **ಕ್ರ.ಸಂ** | **ವಿವರ** | **ಮೊಬಲಗು ರೂ.,ಗಳಲ್ಲಿ** |
|---|---|---|
| 1 | ಯೋಜನೆಗಳ ಮೌಲ್ಯಮಾಪನದ ವೆಚ್ಚಗಳು | 1,46,27,207.00 |
| 2 | ವೇತನಗಳು ಮತ್ತು ಭತ್ಯೆಗಳು | 40,32,874.00 |
| 3 | ಹೊರ ಗುತ್ತಿಗೆ ಸಿಬ್ಬಂದಿಗಳ ವೇತನ (ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ) | 67,94,392.00 |
| 4 | ರಜಾ ನಗದೀಕರಣ | 69,248.00 |
| 5 | ಸಭೆಗಳಲ್ಲಿ ಭಾಗವಹಿಸಿರುವುದಕ್ಕೆ ಮತ್ತು ಸಭೆಗೆ ಬಂದು ಹೋಗುವ ವೆಚ್ಚ | 1,20,000.00 |
| 6 | ಸಭಾ ವೆಚ್ಚಗಳು | 4,46,820.00 |
| 7 | ಅಧಿಸೂಚನಾ ವೆಚ್ಚಗಳು (ಜಾಹಿರಾತು) | 3,35,882.00 |
| 8 | ಮಕ್ಕಳ ಶಿಕ್ಷಣ ವೆಚ್ಚಗಳು (ಅಖಿಲ ಭಾರತೀಯ ಸೇವೆಯ ಅಧಿಕಾರಿಗಳ ಮಕ್ಕಳಿಗೆ) | 27,000.00 |
| 9 | ಮುದ್ರಣ ಲೇಖನ ಸಾಮಗ್ರಿಗಳು ಮತ್ತು ಉಪಭೋಗ್ಯಗಳು | 3,28,645.00 |
| 10 | ದೂರವಾಣಿ ಶುಲ್ಕಗಳು | 98,797.00 |
| 11 | ವೃತ್ತ ಪತ್ರಿಕೆಗಳು | 17,545.00 |
| 12 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಛೇರಿ ವೆಚ್ಚಗಳು ಮತ್ತು ಅಂಚೆ ವೆಚ್ಚಗಳು | 1,89,683.00 |
| 13 | ವಾಹನ ನಿರ್ವಹಣೆ | 21,109.00 |
| 14 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸರ್ಕಾರಿ ವಾಹನಕ್ಕೆ(ಕೆಎ01 ಜಿ 5705) ಪೆಟ್ರೋಲ್ | 2,75,486.00 |
| 15 | ಪೀಠೋಪಕರಣಗಳು ಮತ್ತು ಸ್ಥಿರ ಅಳವಡಿಕೆಗಳು | 1,63,824.00 |
| 16 | **ಮಾನವ ಅಭಿವೃದ್ಧಿ ವರದಿಗಳು**<br>ಎ) ಮಾನವ ಅಭಿವೃದ್ಧಿ ವರದಿಗಳ ಅಧ್ಯಾಯ ಬರಹಗಾರರಿಗೆ ಸಂಭಾವನೆ<br>ಬಿ) ಮಾನವ ಅಭಿವೃದ್ಧಿ ವರದಿಗಳ ಮುದ್ರಣಕ್ಕಾಗಿ ಹಣ ಪಾವತಿಗಳು | 1,75,000.00<br>34,79,000.00 |
| 17 | ಲೆಕ್ಕ ಪರಿಶೋಧನೆ ಶುಲ್ಕಗಳು ಮತ್ತು ಆದಾಯ ತೆರಿಗೆ ತ್ರೈಮಾಸಿಕ ವರದಿಗಳ ಫೈಲಿಂಗ್ ವೆಚ್ಚಗಳು | 49,160.00 |
| 18 | ವಾಹನ ಬಾಡಿಗೆ ವೆಚ್ಚಗಳು | 7,77,400.00 |
| 19 | ವೈದ್ಯಕೀಯ ವೆಚ್ಚ ಮರುಪಾವತಿ | 13,927.00 |
| 20 | ಮುಂಗಡ ಹಣ ಠೇವಣಿಗಳ ಮರುಪಾವತಿ | 1,87,000.00 |
| 21 | ಸಿ–ಸ್ಟೆಪ್ ಸಂಸ್ಥೆಗೆ 6 ಮೌಲ್ಯಮಾಪನ ಅಧ್ಯಯನಗಳ ಬಾಬ್ತು ಹಣ ಪಾವತಿ | 2,50,00,000.00 |
| 22 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಐಎಸ್‌ಓ ಪ್ರಮಾಣೀಕರಣ | 76,700.00 |
| 23 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಸಂಘದ ನವೀಕರಣ | 41,500.00 |
| 24 | ಸುಸ್ಥಿರ ಅಭಿವೃದ್ಧಿ ಗುರಿಗಳ ಸಭೆಯ ಹಾಗೂ ಸಭೆಗೆ ಬಂದು ಹೋಗುವ ವೆಚ್ಚ | 5,62,277.00 |
| 25 | ವಿಶೇಷ ಅಭಿವೃದ್ಧಿ ಯೋಜನೆಯ ಸಮಾಲೋಚಕರಿಗೆ ಸಂಭಾವನೆ | 2,09,800.00 |
| 26 | ಡಿಸಿಷನ್ ಸಪೋರ್ಟ್ ಸಿಸ್ಟಮ್‌ನ ವೆಚ್ಚ | 53,38,320.00 |
| | **ಒಟ್ಟು** | **6,34,58,596.00** |

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ನಿಧಿಯ ಖಾತೆಯಲ್ಲಿ 31–03–2019ರಂದು ಲಭ್ಯವಿರುವ ಶಿಲ್ಕು ರೂ. 8,76,04,055 (ಎಂಟು ಕೋಟಿ ಎಪ್ಪತ್ತಾರು ಲಕ್ಷದ ನಾಲ್ಕು ಸಾವಿರದ ಐವತ್ತೈದು ರೂಪಾಯಿಗಳು ಮಾತ್ರ) ಆಗಿರುತ್ತದೆ.

**ಭವಿಷ್ಯದ ಯೋಜನೆಗಳು**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ವರ್ಷಕ್ಕೆ ರೂ.100 ಕೋಟಿಗಳಿಗಿಂತ ಹೆಚ್ಚಿನ ವೆಚ್ಚದ ಮತ್ತು ಫಲಾನುಭವಿಗಳ ವಿಶಾಲ ವ್ಯಾಪ್ತಿಯನ್ನು ಹೊಂದಿರುವ ದೊಡ್ಡ ಹಣಹೂಡಿಕೆಗಳನ್ನು ಹೊಂದಿರುವ ಪ್ರಮುಖ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೇಲೆ ಮೌಲ್ಯಮಾಪನವನ್ನು ಕೇಂದ್ರೀಕರಿಸಲು ಉದ್ದೇಶಿಸಿರುತ್ತದೆ, ಸುಮಾರು 52 ಅಧ್ಯಯನಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಮೌಲ್ಯಮಾಪನಕ್ಕೆ ಗುರುತಿಸಲಾಗಿರುತ್ತದೆ. ಯುವ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧನಾ ವಿದ್ವಾಂಸದ ವಿದ್ಯಾರ್ಥಿಗಳಿಗೆ ಅವರಲ್ಲಿನ ಸಾಮರ್ಥ್ಯವನ್ನು ನಿರ್ಮಿಸಲು ಮತ್ತು ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಅವರ ಜ್ಞಾನವನ್ನು ಹೆಚ್ಚಿಸಲು ಸರ್ಕಾರಿ ಇಲಾಖೆಗಳಲ್ಲಿ ಸಮಗ್ರ ಕಲಿಕಾ ತರಬೇತಿ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಅವರಿಗೆ ಒದಗಿಸುವುದರ ಮೂಲಕವಾಗಿ ಅವರ ಮುಖಾಂತರ ಇತರರಿಗೆ ಈ ಕುರಿತು ಪ್ರಸಾರ ಮಾಡಲು ಅನುಕೂಲವಾಗುವಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ನೋಡಲ್ ಸಂಸ್ಥೆ ಎಂದು ಗುರುತಿಸಲಾಗಿದೆ. ಇದಲ್ಲದೇ, ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವ ಮೂಲಕ ಸಂಶೋಧನೆ ಮತ್ತು ಮೌಲ್ಯಮಾಪನದಲ್ಲಿ ರಾಜ್ಯ ವಿಶ್ವವಿದ್ಯಾನಿಲಯಗಳ ಸಾಮರ್ಥ್ಯದ ನಿರ್ಮಾಣವನ್ನು ಉತ್ತೇಜಿಸಲು ಕೂಡ ಯೋಜಿಸಲಾಗಿದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವೂ ಸಾಮರ್ಥ್ಯದ ನಿರ್ಮಾಣಕ್ಕಾಗಿ ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ಸಂಬಂಧಿಸಿದ ಇಲಾಖೆಗಳು ಮತ್ತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಮೌಲ್ಯಮಾಪನ ಅಧ್ಯಯನಗಳ ಗುಣಮಟ್ಟವನ್ನು ಸುಧಾರಿಸುವಲ್ಲಿ ಹೆಚ್ಚು ಗಮನಹರಿಸುತ್ತಿದೆ.

ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರವು ಎಂಟರ್‌ಪ್ರೈಸ್ ಪೋರ್ಟಲ್‌ನ್ನು ತನ್ನ ಎಲ್ಲಾ ಕಾರ್ಯ–ಸಂಬಂಧಿತ ದತ್ತಾಂಶ ಮತ್ತು ವಹಿವಾಟು ದತ್ತಾಂಶವನ್ನು ಒಂದೇ ಸ್ಥಳದಲ್ಲಿ ಅಳವಡಿಸಲು ಉದ್ದೇಶಿಸಿರುತ್ತದೆ. ಈ ಪೋರ್ಟಲ್ ಎಲ್ಲಾ ಹಂತದ ಚಟುವಟಿಕೆಗಳನ್ನು ಅಂದರೆ ಉಲ್ಲೇಖ ನಿಯಮಗಳ ಹಂತದಿಂದ ಇಲಾಖೆಗಳು ಸಲ್ಲಿಸುವ ಮೌಲ್ಯಮಾಪನ ಅಧ್ಯಯನಗಳಲ್ಲಿನ ಶಿಫಾರಸ್ಸುಗಳ ಕ್ರಮ ಕೈಗೊಂಡ ವರದಿಗಳ ಹಂತ ಮತ್ತು ಸಮಾಲೋಚಕರ ಸಂಸ್ಥೆಗಳಿಗೆ ಮೌಲ್ಯಮಾಪನ ಅಧ್ಯಯನದ ಬಾಬ್ತು ಹಣ ಪಾವತಿಸುವ ಹಂತಗಳವರೆಗಿನ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಎಂಟರ್‌ಪ್ರೈಸ್ ಪೋರ್ಟಲ್ ಸಹ ಕ್ಷೇತ್ರದ ಮೇಲಿನ ದತ್ತಾಂಶವನ್ನು ಸೆರೆಹಿಡಿಯುತ್ತದೆ ಮತ್ತು ಅಗತ್ಯವಿರುವ ಕೆಲಸದ ಹರಿವಿನೊಂದಿಗೆ ಕೆಲಸದ ಪ್ರಗತಿಯನ್ನು ನವೀಕರಿಸುತ್ತಿದೆ.

ಕರ್ನಾಟಕದ ಮೌಲ್ಯಮಾಪನ ಪ್ರಾಧಿಕಾರವು ಸಕ್ರಿಯವಾಗಿ, ಸರ್ಕಾರದ ಇಲಾಖೆಗಳಿಗೆ ಬೆಂಬಲ ನೀಡುವುದರ ಮೂಲಕವಾಗಿ ಅವುಗಳ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ನೀತಿಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಫಲಿತಾಂಶಗಳನ್ನು ನಿರ್ಣಯಿಸುವುದರ ಮೂಲಕ ಮತ್ತು ಚೌಕಟ್ಟಿನಲ್ಲಿ ಅಗತ್ಯ ಬದಲಾವಣೆಗಳನ್ನು ತರುವಲ್ಲಿ ಪ್ರತಿಕ್ರಿಯೆ ನೀಡುವಿಕೆ ಮತ್ತು ಅನುಷ್ಠಾನದ ವಿನ್ಯಾಸಗಳನ್ನು ಉತ್ತೇಜಿಸುತ್ತದೆ. ಹೀಗಾಗಿ ಸಾಕ್ಷ್ಯಾಧಾರಿತ ನೀತಿಗಳನ್ನು ರೂಪಿಸಲು ಕರ್ನಾಟಕ ಸರ್ಕಾರದ ಉಪಕ್ರಮಗಳನ್ನು ಬೆಂಬಲಿಸುತ್ತದೆ.